# HAVYAKA SANDESHA

ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XIX, No. 4 | July 2011 | Pages 12 | **Rs. 2/-**



## ANNUAL GENERAL BODY MEETING

**The Annual General Body Meeting will be held on Sunday, 28th August 2011 at 3 p.m. at Mysore Association Hall, Matunga (E).**

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat
***Hon. Joint Editor*** : G. V. Bhagwat

***Editorial Committee*** : R. P. Hegde, R. M. Shastri, Smt. Shashikala Hegde

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde — R. P. Hegde
Smt. Shashikala Hegde — R. N.Kameshwar
A. K. Bhat — Smt. Uma Swamy
M. G. Ramakrishna — Sanjay Bhat
Sathishkumar K.C.

***Co-opted Members :***

G. V. Bhagwat — Balchandra Markande
Ganesh Shanbhag — Prabhakar Bhat
Shripad Bhat

***Editorial***

# WASHING AWAY OUR TROUBLES

The cool breeze and the sweet smell of wet earth whisper that the monsoon has finally arrived in Mumbai. The fluttering green leaves, looking fresh with a shower soothe our eyes. And before one could think of beautiful weather, sipping hot tea, eating bhajiyas, the news channels are splashing news of rains having disrupted life in Mumbai. The news of trains running late and water logging paralyzing the life of Mumbaikars suggest that it is the same old story. Mumbai is not yet equipped to face torrential rains

Is it not ironical that we think of developing Mumbai on the line of Shanghai and yet we don't have basic infrastructural facilities? The commercial capital of this country which is one of the costliest cities in the world comes to a halt on heavy rain fall. In the name of development the city has grown haphazardly without adhering to basic environmental norms. Knowing well that illegal encroachments and reclamation of Mithi River over the years are causing problems, it is important to take serious note of it and to take corrective measures to save Amchi Mumbai. As far as storm water drains are concerned they are more than hundred years old and need upgrading. Government should augment sewerage network and also improve drainage system.

The fragrance of wet earth when it first rains turns into unbearable stench of wet garbage. The pot holes on the roads, filth and dirt on the streets make it difficult to walk. The ideas like getting wet in the rain or singing to the tune of nature fade away. If you want to see the worst scenario you should visit any of the slum areas and you will start thinking whether it is a living hell. Monsoon plays heavily on slum dwellers.

It may be recalled that the Government had taken a serious stand in 1999 for banning the use of plastic carry bags below thickness of 20 macrons. The authorities were finding difficult to implement it due to lack of cooperation from citizens. However, they were successful only after continuous persistence. When will we realize that we as citizens too have responsibilities towards keeping our city clean?

Perhaps the deluge of 2005 has left lasting scars in the minds of Mumbaikars. Whenever there is heavy rainfall we can not think of anything else but reaching our destination safely. On the other hand, if it does not rain, we are bothered about lakes not being filled up and possibility water shortage. Therefore, the problem is not rains but our inefficiency to find solution.

Monsoon in Mumbai is not always gloomy. The fury of tidal waves that flash the roads at Marine Drive, the grandeur of waves that chase each another at Juhu Beach excite us. The sea which is full of life also energizes us. One can not simply ignore its splendor.

The sight of street kids jumping in the puddles and making paper boats float brings smile on my face as though the rains have washed away all our troubles.

Amita S Bhagwat

e-mail : amitabhagwat@gmail.com

*PAGE DONATED BY :* ***ADVOCATE M.S. PANDIT, PUNE .***

# PRESIDENT'S MESSAGE

Dear Friends,

Havyaka Welfare Trust is completing 47 years. It is the time to look back, analyze our activities and also to plan for the future. When we analyze our past we sincerely feel that the activities we have undertaken are not meager but definitely not great. We feel that our Trust consisting of talented and resourceful persons could have done better. The activities like providing hostel facilities, rendering medical aid, providing educational help to needy and deserving students, our prestigious KVSS program, activities by women wing are the examples of welfare and cultural activities of the Trust. We had also taken up the ambitious Panvel project but for reasons beyond our control the same could not materialize.

However, there is always a question; the Trust comprising of resourceful and talented members could not have done better? In case of need they have always come forward to help the Trust. Perhaps, if we can make use of the talent of many more such people we can go a step further to achieve greater heights.

The immediate task ahead is constructing the HAVYAKARA BHAVANA & OLD AGE HOME for which we did make a beginning by buying a piece of land in Thane but because of legal complications we had to forego it. However, by way of exchange, we got a bigger land at Dombivli. It is time for us to bring our dream into reality. We are also aware that we are capable of carrying out many more social and cultural activities. All these things can happen only when we join our hands together and work collectively towards the common goal.

Again the same question arises why our people are not coming forward? Where are we lacking? It needs introspection. We should think jointly and plan for the future. When our targets are clear our roads become smooth. We request every Havyaka to come forward with a concrete suggestion to the Managing Committee to decide the future course of action. You can write, telephone us and attend the meeting on invitation.

It is our experience that we do not get feed back which makes it difficult to analyze our action. Friends to make this Trust vibrant we appeal to each and every one to take part in all activities so that the organizers and active volunteers get encouragement. We request you to attend in large number to our forth coming Annual General Body Meeting. We are in the process of finalizing the accounts. We have planned the Annual General Body Meeting on 28$^{th}$ August 2011. Details will follow. We have given advance intimation so that all of you can make it convenient to attend.

As regards the Panvel land about 5 persons are yet to complete the formalities and take money. (One or two persons are yet to be traced). In few cases we are not able to complete the transaction as records are not clear. Some persons have produced receipts about the payments made by them but there is no entry in the records. Some villagers are creating problems by obstructing the survey and some others are harassing as they claim that they have not received the money. We are sorting out the problem one by one.

There is still no progress on NA status of Dombivli land.

With best wishes.

**N. R. HEGDE**
*President*

## SWARNAWALLI SEVA SAMITI, MUMBAI

**As advised by Shri Guruji, Swarnawalli Seva Samiti will conduct the following activities at Pejawar Mutt, Santacruz (East)**

1. **Nutana Upakarma on 15th July 2011**
2. **Varamahalaxmi Vrata on 12th August 2011 at 10.00 a.m.**
3. **Yajur Upakarma on 13th August, 2011 at 10.00 a.m.**

**All are requested to participate and get the blessings of Mahamata & Shri Guruji.**

**The charges are :**

| | |
|---|---|
| **NUTANA UPAKARMA** | **Rs. 150/- per head** |
| **VARAMAHALAXMI VRATA** | **Rs. 151/- per head** |
| **YAJUR UPAKARMA** | **Rs. 151/- per head** |

***For other details you may contact :***

| | |
|---|---|
| **1. Shri R. G. Bhat** | **28542895 / 9867300127** |
| **2. Shri K. C. Hegde** | **28671749 / 9869074115** |
| **3. Smt. Tanuja Hegde** | **9869431749** |

***Note* : Your advance enrolement will help the volunteers to make proper arrangements.**

*PAGE DONATED BY : **SMT. SHANTA V. HEGDE,** CARMICHAEL ROAD (DEC.-2011)*

# ಮೊಬೈಲ್ ಎಂಬ ಗೋಮುಖ ವ್ಯಾಘ್ರ

**ಭವ್ಯಾ ಹೆಗಡೆ, ಹಳೆಯೂರು**

“ಈಗಿನ ಮಕ್ಕಳ ಕೈಯಲ್ಲಿ ಎಷ್ಟೊತ್ತಿಗೆ ನೋಡಿದ್ರೂ ಮೊಬೈಲ್, ಅದನ್ನು ಕಟ-ಕಟ್ ಮಾಡ್ತಾ ಅದರೊಳಗೇ ಸೇರಿಹೋಗುತ್ತಾರೆ. ಅದೊಂದು ಕೈಲಿದ್ದು ಬಿಟ್ಟರೆ ಓದು, ಕೆಲಸ, ಆಟ ಯಾವುದೂ ಬೇಕಾಗಿಲ್ಲ, ಎದುರಿಗೆ ಕೂತವರ ಜೊತೆ ಒಂದು ಮಾತೂ ಆಡಲು ಪುರುಸೊತ್ತಿರುವುದಿಲ್ಲ” ಇಂಥ ಧಾಟಿಯ ಅದೆಷ್ಟೋ ಬೈಗುಳಗಳು ನಿಮ್ಮ ಕಿವಿಗೂ ಬಿದ್ದಿರಬಹುದು. ಆಗೆಲ್ಲಾ ನಮ್ಮ ಮೊಗ್ಗಿನ ಮನಸುಗಳ ಚಿತ್ತ ಮೊಬೈಲ್‌ನತ್ತ ಹೆಚ್ಚಾಗುತ್ತಿದೆ ಎಂದು ಅನ್ನಿಸಲಿಲ್ಲವೇ?

ರಸ್ತೆಯಲ್ಲಿ ಸಾಗುವಾಗ, ಓದುವಾಗ, ಬರೆಯುವಾಗ, ಗುಂಪುಕಟ್ಟಿ ಮಾತನಾಡುವಾಗ, ಆಡುವಾಗ, ಕ್ಲಾಸಿನಲ್ಲಿ ಪಾಠ ಕೇಳುವಾಗ, ಯಾವುದೋ ಕಾರ್ಯಕ್ರಮದಲ್ಲಿ ಕೂತಿರುವಾಗ, ಹೀಗೆ ಎಲ್ಲೆಂದರಲ್ಲಿ ಹೇಗೆಂದರ್ಹಾಗೆ ಮೊಬೈಲ್ ಬಳಸುತ್ತಿರುವುದು ಸಾಮಾನ್ಯವಾಗಿದೆ. ತಮ್ಮ ಅಕ್ಕಪಕ್ಕ ಏನಾಗುತ್ತಿದೆ ಎಂಬುದರ ಅರಿವೆಯೇ ಇರದಷ್ಟು ಮೊಬೈಲ್‌ನಲ್ಲಿ ಮುಳುಗಿ ಹೋಗಿರುತ್ತಾರೆ. ಮೊಬೈಲ್ ಎಂಬುದು ತಂದೆ-ತಾಯಿ, ಸ್ನೇಹಿತರು, ರಕ್ತ ಸಂಬಂಧಿಗಳಿಗಿಂತಲೂ ಮುಖ್ಯವಾಗಿ ಬಿಟ್ಟಿದೆ. ಮನೆಯವರ ಬಳಿ ಒಂದು ನಿಮಿಷ ಕೂತು ಮಾತನಾಡಲು ವೇಳೆ ಇರದವನು, ಸ್ನೇಹಿತರ ಜೊತೆ ಒಂದು ಘಳಿಗೆ ಕಳೆಯಲು ಪುರುಸೊತ್ತಿಲ್ಲದವನು, ಮೊಬೈಲ್‌ನಲ್ಲಿ ಮುಖವೇ ನೋಡದವರ ಜೊತೆ ಘಂಟೆಗಟ್ಟಲೇ ಹರಟುತ್ತಾನೆ. ದಿನಪೂರ್ತಿ ಮೆಸೇಜ್‌ಗಳನ್ನು ಕಳುಹಿಸುತ್ತಾನೆ.

ಅಂದು ನನ್ನ ಗೆಳತಿಯ ಜೊತೆ ಬಟ್ಟೆ ಖರೀದಿಸಲೆಂದು ಹೋಗಿದ್ದೆ. ಅಲ್ಲಿ ನನ್ನ ಗೆಳತಿಯ ಊರಿನವಳೊಬ್ಬಳು ನಮ್ಮ ಜತೆಯಾದಳು. ಸುಮಾರು ಎರಡು ಘಂಟೆಗಳ ಕಾಲ ಜೊತೆಯಲ್ಲಿಯೇ ಇದ್ದಿದ್ದರಿಂದ ತುಂಬಾ ಆತ್ಮೀಯವಾದಳು. ಬಟ್ಟೆಗಳ ಖರೀದಿ ಮುಗಿದ ನಂತರ, “ಅಕ್ಕಾ ನನಗೊಂದು ಗಿಫ್ಟ್ ತೆಗೆದುಕೊಳ್ಳಬೇಕು” ಎಂದಳು. ಸರಿ ಎಂದು ಒಂದು ಗಿಫ್ಟ್ ಸೆಂಟರ್ ಒಳಗೆ ಹೋದೆವು. “ಫ್ರೆಂಡ್ ಬರ್ತ್‌ಡೆ ಬಂತೇನೇ?” ಎಂದು ಕೇಳಿದೆ. ಅದಕ್ಕವಳು ಇಲ್ಲವೆಂದು ಗೋಣಾಡಿಸಿ, ಇಟ್ಟಿದ್ದ ಬಣ್ಣದ ಆಕರ್ಷಕ ಗಿಫ್ಟ್‌ಗಳತ್ತ ಕಣ್ಣರಳಿಸಿ ನೋಡುತ್ತಿದ್ದಳು. ಸ್ವಲ್ಪ ಸಮಯದ ನಂತರ “ಅಕ್ಕಾ, ಫೋನಿನಲ್ಲಿ ಒಬ್ಬ ಫ್ರೆಂಡ್ ಆಗಿದ್ದಾನೆ. ನಾನು ಅವನ ಮುಖವನ್ನೂ ನೋಡಿಲ್ಲ. ಏನು ಮಾಡ್ತಿದಾನೆ ಅಂತಾನೂ ಗೊತ್ತಿಲ್ಲ. ಆದ್ರೆ ನಾವಿಬ್ರೂ ತುಂಬಾನೆ ಪ್ರೀತಿಸ್ತಾ ಇದೀವಿ. ನಾಳೆ ಬರ್ತಿದಾನೆ. ಅದಕ್ಕೆ ಅವನಿಗೊಂದು ಗಿಫ್ಟ್ ತೆಗೆದುಕೊಳ್ಳಬೇಕು” ಎನ್ನುತ್ತ 250 ರೂ.ಗಳ ಒಂದು ಸುಂದರವಾದ ತಾಜ್ ಮಹಲ್‌ನ ಪ್ಯಾಕ್ ಮಾಡಿಸಿದಳು. ನನಗೆ ಆಶ್ಚರ್ಯ. ಈಗೊಂದು ತಿಂಗಳ ಹಿಂದೆ ಕೇವಲ ಮೊಬೈಲ್‌ನಲ್ಲಿ ಪರಿಚಯವಾಗಿ ಯಾರು? ಏನು ಎಂತ? ಎತ್ತ ಎಂಬುದರ ಅರಿವೇ ಇರದ ಯಾರೋ ಒಬ್ಬನಿಗೆ ಇಷ್ಟೊಂದು ಬೆಲೆ ಬಾಳುವ ಉಡುಗೊರೆಯಾ? ಅವನನ್ನು ಅಷ್ಟೊಂದು ಪ್ರೀತಿಸುವಷ್ಟು ನಂಬಿಕೆಯಾ? ನಾನು ಯೋಚನೆಗೆ ಬಿದ್ದೆ. ಈ ಮೊಬೈಲ್ ಎನ್ನುವುದು ಮೊಗ್ಗಿನ ಮನಸ್ಸನ್ನು ಅದೆಷ್ಟೊಂದು ರೀತಿಯಲ್ಲಿ ಹಾದಿ ತಪ್ಪಿಸುತ್ತಿದೆ ಎಂದು. ಆಕೆ ಇನ್ನೂ ಪಿ.ಯು.ಸಿ. ವಿದ್ಯಾರ್ಥಿನಿ. ವಿದ್ಯಾರ್ಥಿ ಜೀವನದ ಅತೀ ಸುಂದರವಾದ ಪ್ರದೇಶಕ್ಕೆ ಕಾಲಿಡುತ್ತಿರುವ ಆಕೆಗೆ ಈ ಮೊಬೈಲ್ ಸಹವಾಸ ಬೇಕಿತ್ತಾ? ಇದು ಮೊಬೈಲ್ ಎಂಬ ಮಾಯೆ ಮೊಗ್ಗಿನ ಮನಸ್ಸನ್ನು ಕೆಡಿಸುವ ಒಂದು ಬಗೆ ಮಾತ್ರ!

ನೀವು ಅದೆಷ್ಟೋ ಸುದ್ದಿಗಳನ್ನು ಕೇಳಿರಬಹುದು, ನೋಡಿರಬಹುದು. ಮೊಬೈಲ್ ಕ್ಯಾಮರಾಗಳಿಂದ, ವಿಡಿಯೋಗಳಿಂದ ಅದೆಷ್ಟೋ ಹೆಣ್ಮನಸ್ಸುಗಳ ಅಂತ್ಯವಾಗಿದೆ. ಅದೆಷ್ಟೋ ಹೆಣ್ಣು ಜೀವಗಳು ಜೀವಂತ ಶವವಾಗಿವೆ. ಬಾಳಿನಲ್ಲಿಯ ಬೆಳಕನ್ನೇ ಕಳೆದುಕೊಂಡು ದಿನ ಪ್ರತೀಕ್ಷಣ ಕಪ್ಪು ಪಂಜರದೊಳಗೆ ನರಳುತ್ತಿವೆ. ಅವರೆಲ್ಲರ ಈ ಕರಾಳ ಸ್ಥಿತಿಗೆ ಮತ್ತದೇ ಮೊಬೈಲ್ ಕಾರಣೀಭೂತವಾಗಿ ನಿಲ್ಲುತ್ತದೆ. ಆ ಕ್ಷಣದ ಮೋಜಿಗೆ, ತಾನೇನೂ ಕಡಿಮೆ ಇಲ್ಲ ಎಂಬ ಹುಂಬತನಕ್ಕೆ ಮತ್ತೊಂದು ಜೀವ ಬಲಿಯಾಗುತ್ತಿರುತ್ತದೆ. ಅಂತಹ ವಿಚಿತ್ರ ಮನಸ್ಸುಗಳು ಮಾಡುವ ಕುಕೃತ್ಯಕ್ಕೆ ಬೇರೊಂದು ಜೀವ ನರಳಿ-ನರಳಿ ಪ್ರತೀಕ್ಷಣ ಸಾಯುತ್ತಿರುತ್ತದೆ. ಇಂತಹ ಸ್ಥಿತಿಗೆ ಕಾರಣವಾದ ಆ ಅನಾರೋಗ್ಯಕರ ಮನಸ್ಸು, ಎಷ್ಟೋ ಹೆಣ್ಮನಸ್ಸುಗಳ ಕಣ್ಣೀರಿಗೆ ಕಾರಣವಾದ ಆ ಮನಸ್ಸು, ಖಂಡಿತಾ ಸುಖವಾಗಿರುವುದಿಲ್ಲ ಎಂದನ್ನಿಸುವುದಿಲ್ಲವೇ? ಇಂತಹ ಅವಗಡಕ್ಕೆಲ್ಲಾ ಕಾರಣವಾಗುವ ಮೊಬೈಲ್ ನಮಗೆ ಅವಶ್ಯಕವಾ?

ಬಸ್‌ಗಳಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ರಸ್ತೆಯಲ್ಲಿ ಹೀಗೆ ಹಲವಾರು ಸಾರ್ವಜನಿಕ ಜಾಗದಲ್ಲಿ ಮೊಬೈಲ್‌ಗಳಲ್ಲಿ ಹಾಡುಗಳನ್ನು ದೊಡ್ಡದಾಗಿ ಹಚ್ಚಿ ಮೋಜು ಮಾಡುವವರನ್ನು ನೀವು ನೋಡಿಯೇ ನೋಡಿರುತ್ತೀರಿ. ತಾನು ಹಾಗೂ ತನ್ನ ಖುಶಿ ಮುಖ್ಯ ಎಂದೋ ಅಥವಾ ತನ್ನ ಕೈಲೂ ದುಬಾರಿ ಬೆಲೆಯ, ಮೊಬೈಲ್ ಇದೆ ಎಂದು ತೋರಿಸಲೆಂದೋ, ತನಗೂ ಈ ಸುತ್ತಲಿರುವ ಜನಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ, ಅವರಿಗೆ ತೊಂದರೆಯಾದರೆ ತನಗೇನು ಎಂಬ ಅಸಡ್ಡೆ ಭಾವದಿಂದಲೇ ಇರುವ ಜನ ಹೆಚ್ಚಾಗಿರುವುದರಿಂದ ಸಾರ್ವಜನಿಕ ಸ್ಥಳದಲ್ಲಿ ಮೊಬೈಲನ್ನು ದೊಡ್ಡ ಧ್ವನಿಯಲ್ಲಿ ಕೂಗಿಸುವುದೀಗ ಸಾಮಾನ್ಯವಾಗಿ ಬಿಟ್ಟಿದೆ. ಮೊಬೈಲ್ ಮಾಡುವ ಅಥವಾ ಮಾಡಿಸುವ ಅಸಂಸ್ಕೃತ ಕೃತ್ಯವಿದು.

ಎಷ್ಟೋ ಮನೆಗಳಲ್ಲಿ ಈಗೀಗ ಮಕ್ಕಳು ಹಿರಿಯರ ಜೊತೆ ಮಾತನಾಡುವುದನ್ನು ನಿಲ್ಲಿಸಿದ್ದಾರೆ; ಬರೆಯುವುದನ್ನು ಕಡಿಮೆ ಮಾಡಿದ್ದಾರೆ. ಅವರಿಗೆ ಸಹಾಯ ಮಾಡುವುದಂತೂ ದೂರದ ಮಾತು. ದೇವರೆದುರು ಕೂತು ಪ್ರಾರ್ಥಿಸುವುದಕ್ಕೂ ಪುರುಸೊತ್ತಿರುವುದಿಲ್ಲ. ಹಾಗಾದರೆ ಓದುತ್ತಿದ್ದಾರಾ? ಖಂಡಿತ ಇಲ್ಲ. ಓದುವುದರಲ್ಲೂ ಕಡಿಮೆ ಅಂಕಗಳೇ ಬರುತ್ತಲಿವೆ. ವರ್ಗದಲ್ಲಿ ಹೇಳುವ ಪಾಠಗಳ ಮೇಲೆ ಲಕ್ಷ್ಯವೇ ಇಲ್ಲ. ಆಟೋಟಗಳಲ್ಲೂ ಸ್ಪರ್ಧಿಸುತ್ತಿಲ್ಲ. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಆಸಕ್ತಿ ಇಲ್ಲ, ಗುಂಪಿನಲ್ಲಿದ್ದರೂ ಏಕಾಂಗಿಯಾಗಿಯೇ ಇರುತ್ತಾರೆ. ಒಟ್ಟಿನಲ್ಲಿ ಈಗಿನ ಮಕ್ಕಳು ಮಂಕಾಗುತ್ತಿದ್ದಾರೆ. ಇವಕ್ಕೆಲ್ಲ ಕಾರಣ? ಮತ್ತದೇ ಮೊಬೈಲ್!

ಮೊಬೈಲ್‌ನ ಅತಿಯಾದ ಬಳಕೆಯಿಂದ ಮನೆಯಲ್ಲಿಯ ವಾತಾವರಣ ಹದಗೆಡುತ್ತದೆ. ಒಬ್ಬರಿಗೊಬ್ಬರು ಕೂತು ಮಾತನಾಡಲೇ ವೇಳೆ ಇರದಿರುವುದರಿಂದ ಕುಟುಂಬ ಎನ್ನುವುದು ಬಿರುಕು ಬಿಡಲಾರಂಭಿಸುತ್ತದೆ. ಪ್ರತಿಯೊಂದು ಸಂಬಂಧಕ್ಕೂ ಬೇಕಾಗಿರುವುದು ಪ್ರೀತಿಯ ನೋಟದ ಮಾತುಗಳೇ ಹೊರತು ಮೊಬೈಲ್‌ನ ಕಿಣಿಕಿಣಿ ಅಲ್ಲ. ನೀವೇ ಹೇಳಿ, ನಿಮ್ಮ ಅತಿಯಾದ ಮೊಬೈಲ್ ಬಳಕೆಯಿಂದ ಗದರದೇ ಇರುವ ಪಾಲಕರಿದ್ದಾರೆಯೇ? ಖಂಡಿತ ಇಲ್ಲ. ತನ್ನ ಮಗು ಹಾಳಾಗಬಾರದು, ಮೊಬೈಲ್‌ನಿಂದ ದಾರಿ ತಪ್ಪಬಾರದು ಎಂಬ ಸದುದ್ದೇಶವನ್ನು ಇಟ್ಟುಕೊಂಡ ಪ್ರತಿಯೊಬ್ಬ ಪಾಲಕರೂ ತಮ್ಮ ಮಕ್ಕಳನ್ನು ಗದರಿಯೇ ಗದರುತ್ತಾರೆ. ಅದು ಅವರ ಪ್ರೀತಿಯ ಕರ್ತವ್ಯ ಕೂಡ!

ಮೊಬೈಲ್‌ನಲ್ಲಿ ಮಾತನಾಡುವಾಗ ಬಲಕಿವಿಯಲ್ಲಿಟ್ಟು ಹೆಚ್ಚು ಹೊತ್ತು ಮಾತನಾಡಿದರೆ ಮೆದುಳಿಗೆ ಪೆಟ್ಟು ಬೀಳುತ್ತದೆ. ಇಯರ್ ಫೋನ್ ಅನ್ನು ತಾಸುಗಟ್ಟಲೇ ಕಿವಿಗೆ ಸಿಕ್ಕಿಸಿಕೊಂಡು ಹಾಡು ಕೇಳಿದರೆ ಬ್ರೇನ್‌ಟ್ಯೂಮರ್ ಬರುವ ಸಾಧ್ಯತೆ ಇದೆ. ಮೊಬೈಲ್ ವೈಬ್ರೇಟ್ ಆಗುವುದರಿಂದ ದೇಹದಲ್ಲಿ ಹಲವಾರು ರೀತಿಯಲ್ಲಿ ಅನಾರೋಗ್ಯ ಉಂಟಾಗುತ್ತದೆ. ಇವೆಲ್ಲ ಸಾಮಾನ್ಯವಾಗಿ ಮೊಬೈಲ್ ಬಳಸುವ ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯವೇ ಆಗಿದೆ. ತಿಳಿದಿದ್ದರೂ ಮತ್ತದೇ ತಪ್ಪನ್ನು ಮಾಡುತ್ತಾರೆ. ಯಾಕೆಂದು ಕೇಳಿದರೆ ಸಾಮಾನ್ಯವಾಗಿ ಇರುವ ಉತ್ತರ - ಈಗದು ಅನಿವಾರ್ಯ ಎಂದು. ಮೊಬೈಲ್ ಅನಿವಾರ್ಯ ಹೌದು. ಆದರೆ ಒಬ್ಬ ವ್ಯಕ್ತಿಯ ಜೀವಕ್ಕಿಂತಲೂ ಅದು ಅನಿವಾರ್ಯವಾಗಬಾರದು.

ಮೊಬೈಲ್ ಸೆಟ್‌ಗಳ ಹಾಗೂ ಸಿಮ್‌ಗಳ ದರ ಕಡಿಮೆಯಾಗಿರುವುದರಿಂದ ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ರಾರಾಜಿಸುತ್ತಿರುತ್ತದೆ. ತಮಗೆ ಅದರ ಅವಶ್ಯಕತೆ ಇದೆ ಎಂದು ಖರೀದಿಸುವುದಕ್ಕಿಂತ ಹೆಚ್ಚಾಗಿ ಬೇರೆಯವರ್ಯಾರೋ ತೆಗೆದುಕೊಂಡಿದ್ದಾರೆ. ಅವರಿಗಿಂತ ತಾನೇನು ಕಡಿಮೆ ಎಂದು ಪೈಪೋಟಿಯ ಮೇಲೆ ತೆಗೆದುಕೊಳ್ಳುವವರೇ ಹೆಚ್ಚಾಗಿದ್ದಾರೆ. ಹಾಗಾಗಿ ಒಬ್ಬೊಬ್ಬರ ಕೈಯಲ್ಲಿ ಎರಡಕ್ಕೂ ಹೆಚ್ಚು ಮೊಬೈಲ್ ಸೆಟ್‌ಗಳು ಹಾಗೂ ಹತ್ತಕ್ಕೂ ಹೆಚ್ಚು ಸಿಮ್‌ಗಳನ್ನು ಕಾಣುತ್ತೇವೆ. ಸರಿ, ತೆಗೆದುಕೊಳ್ಳಲಿ, ಆದರೆ ಆ ತೆಗೆದುಕೊಂಡ ಮೊಬೈಲ್ ಸೆಟ್‌ಗಳು ಕೆಲ ತಿಂಗಳಿಗೇ ಬೇಸರ ಬರುತ್ತದೆ. ಕೆಲ ವರ್ಷಕ್ಕೆ ಅದು ಕಸದ ಬುಟ್ಟಿ ಸೇರಿರುತ್ತದೆ. ನಂತರ ಅದರ ಅವಶೇಷ? ‘ಇ-ವೇಸ್ಟೇಜ್’ (ಇಲೆಕ್ಟ್ರಾನಿಕ್ ವೇಸ್ಟೇಜ್)ಗೆ ಹೋಗಿ ಸೇರುತ್ತದೆ. ವೇಸ್ಟೇಜ್‌ಗಳೆಂದರೆ ಕಸ, ಬಳಕೆಗೆ ಬಾರದಿರುವ

PAGE DONATED BY : **SHRI BALCHANDRA MARKANDE, DOMBIVLI**

ವಸ್ತು ಎಂದರ್ಥವಾಗುತ್ತದೆ. ಎಷ್ಟೋ ಕಸಗಳನ್ನು ಬಿಸಾಡಿದ ನಂತರ ಮಣ್ಣಾಗಿ ಹೋಗುತ್ತದೆ. ಆದರೆ 'ಇ-ವೇಸ್ಟೇಜ್' ಎಂಬುದಿದೆಯಲ್ಲ ಅದು ಮಣ್ಣಿನಲ್ಲಿ ವಿಘಟನೆ ಹೊಂದುವುದಿಲ್ಲ. ಅದು ಹಾಗೆಯೇ ಉಳಿದು ಭೂಮಾಲಿನ್ಯಕ್ಕೆ ಕಾರಣವಾಗುತ್ತದೆ. ಥೇಟ್ ಪ್ಲಾಸ್ಟಿಕ್‌ನಂತೆಯೇ. ಈಗ ಜಗತ್ತಿನಲ್ಲಿ ಪ್ಲಾಸ್ಟಿಕ್ ಎಷ್ಟು ರೀತಿಯಲ್ಲಿ ಮಾಲಿನ್ಯವುಂಟು ಮಾಡುತ್ತಿದೆಯೋ ಇ-ವೇಸ್ಟೇಜ್‌ಗಳೂ ಅಷ್ಟೇ ಸಮಪಾಲನ್ನು ಹೊಂದಿವೆ. ಸ್ವಾರ್ಥದ ಶೋಕಿಗೆಂದು ನಾವಿಟ್ಟುಕೊಳ್ಳುವ ವಸ್ತು ನಮ್ಮ ನಿಸರ್ಗಕ್ಕೆ ಶಾಪವಾಗಿ ಪರಿಣಮಿಸುತ್ತದೆ.

ಮೊದಲೆಲ್ಲ ಪ್ರತಿಯೊಬ್ಬರ ಮನೆಯಲ್ಲೂ ಗುಬ್ಬಿಗೂಡು ಕಟ್ಟಿರುತ್ತಿತ್ತು. ಪುಟ್ಟ ದೇಹದ, ಮುದ್ದುಮುಖದ ತನ್ನ ಸುಂದರವಾದ ಧ್ವನಿಯಿಂದ ಇಡೀ ಮನೆಯ ಸಂತಸವನ್ನು ಕಾಯ್ದಿರಿಸುತ್ತಿತ್ತು. ಸ್ವಲ್ಪ ವರ್ಷದ ನಂತರ ಅಲ್ಲಲ್ಲಿ ಒಂದೊಂದು ಮನೆಯಲ್ಲಿ ಮಾತ್ರ ಗುಬ್ಬಿ ಗೂಡು ಕಾಣಬರುತ್ತಿದ್ದರೆ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಗುಬ್ಬಿಗಳು ಕಾಣುತ್ತಿದ್ದವು. ಆ ಗುಬ್ಬಿ ಮರಿಗಳ ಹಾರಾಟ-ಕೂಗಾಟಗಳನ್ನು ಕೇಳುವುದೇ ಒಂದು ಖುಶಿ. ಆದರೆ ಈಗ? ಗುಬ್ಬಿಗಳನ್ನು ದುರ್ಬೀನು ಹಾಕಿ ಹುಡುಕಬೇಕಿದೆ. ಇದಕ್ಕೆ ಕಾರಣವೇನು ಗೊತ್ತಾ? ಮತ್ತದೇ ಮೊಬೈಲ್! ಮೊಬೈಲ್ ತಾನು ಎಳೆದುಕೊಳ್ಳುವ ಸಿಗ್ನಲ್‌ನಿಂದಾಗಿ ಗುಬ್ಬಿಗಳು ಸಿಕ್ಕಿ ಸಾಯುತ್ತವೆ. ಈ ನೆಟ್‌ವರ್ಕ್‌ನ ಕಾರಣವಾಗಿ ಗುಬ್ಬಿಯ ತಲೆಮಾರೇ ನಾಶದ ಹಾದಿಯತ್ತ ಹೆಜ್ಜೆ ಇಟ್ಟಿದೆ. ನಮ್ಮ ಶೋಕಿಗಾಗಿ ನಿಸರ್ಗದಲ್ಲಿರುವ ಮತ್ತೊಂದು ಜೀವಿಯ ವಂಶವನ್ನೇ ನಾಶ ಮಾಡುವುದು ಮಹಾಪಾಪ ಅನ್ನಿಸುವುದಿಲ್ಲವೇ?

ಶಿಕ್ಷಣ, ಆರೋಗ್ಯ ಮನೆಯಲ್ಲಿನ ಖುಶಿಯ ವಾತಾವರಣ, ನಿದ್ದೆ, ನಿರಾಳ ಬದುಕು ಇವೆಲ್ಲವನ್ನೂ ಕಸಿದುಕೊಳ್ಳುವ ಮೊಬೈಲ್ ಶಿಕ್ಷಣದ ಬದುಕಿಗೆ, ಮೊಗ್ಗಿನ ಮನಸ್ಸಿಗೆ ಅವಶ್ಯಕವಲ್ಲ. ಹಳ್ಳಿಯಿಂದ ದೂರದ ನಗರದಲ್ಲಿದ್ದು ಶಿಕ್ಷಣ ಕಲಿಯುವವರಿಗೆ ಅನಿವಾರ್ಯವೆಂದು ಪಾಲಕರೇ ತಮ್ಮ ಮಕ್ಕಳಿಗೆ ಮೊಬೈಲ್ ತೆಗೆಸಿಕೊಟ್ಟಿರುತ್ತಾರೆ. ಅದನ್ನೇ ದುರುಪಯೋಗ ಮಾಡಿಕೊಂಡ ಮೊಗ್ಗಿನ ಮನಸ್ಸುಗಳ ಉದಾಹರಣೆ ಸಾಕಷ್ಟಿವೆ. ಇನ್ನು ಮನೆಯಿಂದಲೇ ಕಾಲೇಜಿಗೆ ಹೋಗುವ, ಸಂಬಂಧಿಕರ ಮನೆಯಲ್ಲಿದ್ದು ಶಿಕ್ಷಣ ಮುಂದುವರೆಸುತ್ತಿರುವ ಯಾವ ಮೊಗ್ಗಿನ ಮನಸ್ಸಿಗೂ ಮೊಬೈಲ್‌ನ ಅವಶ್ಯಕತೆ ಖಂಡಿತ ಇಲ್ಲ. ಹಾಗೆ ನೋಡಿದರೆ ಎಲ್ಲೆಂದರಲ್ಲಿ ಕಾಯಿನ್‌ಬೂತ್ ಇರುವುದರಿಂದ ಮನೆಯಿಂದ ಹೊರಗಿದ್ದು ಓದುವ ಮನಸ್ಸಿಗೂ ಮೊಬೈಲ್ ಅವಶ್ಯಕತೆ ಇಲ್ಲ. ಕಾಲೇಜುಗಳಲ್ಲಿ, ಹಾಸ್ಟೇಲ್‌ಗಳಲ್ಲಿ ಮೊಬೈಲ್‌ಗಳನ್ನು ನಿಷೇಧ ಮಾಡಿದರೂ, ಕಾಲೇಜು ವಿದ್ಯಾರ್ಥಿಗಳಲ್ಲಿ ಶೇಕಡಾ ೯೦ ವಿದ್ಯಾರ್ಥಿಗಳ ಬಳಿ ಮೊಬೈಲ್ ಇದೆ ಎಂದರೆ ಆ ನಿಯಮ ಎಷ್ಟು ಕಟ್ಟುನಿಟ್ಟಾಗಿದೆ ಹಾಗೂ ಆ ನಿಯಮವನ್ನು ವಿದ್ಯಾರ್ಥಿಗಳು ಎಷ್ಟು ಗೌರವಿಸುತ್ತಾರೆಂಬುದನ್ನು ನೀವೇ ಯೋಚಿಸಿ.

ಉದ್ಯೋಗಸ್ಥರಿಗೆ, ವ್ಯವಹಾರಸ್ಥರಿಗೆ, ತಮ್ಮ ಕಾಲ ಮೇಲೆ ತಾವು ನಿಂತು ತಮ್ಮ ಹಾಗೂ ಮೊಬೈಲ್‌ನ ಎರಡದರ ಖರ್ಚನ್ನು ತಾವೇ ತೂಗಿಸಿಕೊಂಡು ಹೋಗುವಷ್ಟು ಸಾಮರ್ಥ್ಯವುಳ್ಳವರಿಗೆ ಮೊಬೈಲ್ ಅವಶ್ಯಕವೇ ಹೊರತು ಇನ್ನೂ ಶಿಕ್ಷಣವನ್ನು ಮುಗಿಸದ ಮೊಗ್ಗಿನ ಮನಸ್ಸಿಗೆ ಮೊಬೈಲ್ ಅನಿವಾರ್ಯವಲ್ಲ. ಪಾಲಕರು ಮೊಬೈಲ್ ಬಳಸುವುದಕ್ಕಾಗಿ ಗದರುವುದು ನಿಮ್ಮ ಮೇಲಿರುವ ಪ್ರೀತಿಗಾಗಿ, ಕಾಳಜಿಗಾಗಿಯೇ ಹೊರತೂ ದ್ವೇಷಕ್ಕಾಗಿ ಅಲ್ಲ. ಇವಿಷ್ಟನ್ನು ಅರ್ಥೈಸಿಕೊಂಡರೆ ಪಾಲಕರ ಬುದ್ಧಿಮಾತೂ ನಿಮಗೆ ಅರ್ಥವಾಗುತ್ತದೆ. ಇಷ್ಟಾದ ಮೇಲೂ ನೀವು ಮೊಬೈಲ್ ಉಪಯೋಗಿಸುತ್ತೀರಿ ಎಂದು ಹಠ ಹಿಡಿದರೆ ಒಂದು ಕಿವಿಮಾತು 'ನಿಮ್ಮ ಹಿಡಿತದಲ್ಲಿ ಮೊಬೈಲ್ ಇರಬೇಕೇ ಹೊರತು, ಮೊಬೈಲ್‌ನ ಹಿಡಿತದಲ್ಲಿ ನೀವಿರಬೇಡಿ.' ನಮ್ಮ ಜೀವಕ್ಕೆ ಜೀವನಕ್ಕೆ-ನಿಸರ್ಗಕ್ಕೆ ಇಷ್ಟೊಂದು ಮಾರಕವಾಗಿರುವ ಮೊಬೈಲ್ ಎಂಬ ಮಾಯೆಯನ್ನು ಯಾವ ರೀತಿಯಲ್ಲಿ ಹಿಡಿತದಲ್ಲಿಟ್ಟುಕೊಳ್ಳ ಬೇಕೆಂಬ ಅರಿವು ಈಗ ಆಗಿರಬಹುದಲ್ಲವೇ? ಸ್ವಲ್ಪ ಯೋಚಿಸಿ ನಿಮ್ಮ ಜೀವನವನ್ನು ನಿಸರ್ಗವನ್ನು ಕಾಪಾಡುವ ಹೊಣೆ ನಮ್ಮ ಕೈಯಲ್ಲೇ ಇದೆ. ಮೊಬೈಲ್‌ನ ದಾಸ್ಯತನದಿಂದ ಹೊರಬನ್ನಿ. ಹೊರಗಿನಿಂದ ಸಹಾಯ ಮಾಡುವಂತೆ ತೋರಿ ಒಳಗೊಳಗೆ ಹಲವಾರು ಕೆಡುಕುಗಳನ್ನುಂಟು ಮಾಡುತ್ತಿರುವ ಗೋಮುಖವ್ಯಾಘ್ರದಂತಹ ಮೊಬೈಲ್‌ನಿಂದ ದೂರವಿದ್ದಷ್ಟೂ ಒಳಿತಲ್ಲವೇ?

***(ಕೃಪೆ : ಧ್ಯೇಯನಿಷ್ಠ ಪತ್ರಕರ್ತ)***


॥ ಪ್ರಸೀದಾತು ಶ್ರೀ ರಾಮಚಂದ್ರ ॥

**ಶ್ರೀಮದ್ ಜಗದ್ಗುರು ಶಂಕರಾಚಾರ್ಯ**

**ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಕೃಪಾಶೀರ್ವಾದಗಳೊಂದಿಗೆ**

# ಶ್ರೀ ರಾಮಚಂದ್ರ ಕೃಪಾಪೋಷಿತ ಯಕ್ಷಗಾನ ಮಂಡಳಿ

ರಾಮಚಂದ್ರಾಪುರ, ಹೊಸನಗರ ಇವರು

**ದಿನಾಂಕ 26.06.2011ರಿಂದ 03.07.2011ರ ವರೆಗೆ ಸಂಜೆ ಗಂಟೆ 6.00ರಿಂದ 10.00ರ ತನಕ**

**ವಿಶ್ವೇಶ್ವರಯ್ಯ ಸಭಾಂಗಣ, ಮಾಟುಂಗ ( ಪ ), ಇಲ್ಲಿ ಹಮ್ಮಿಕೊಂಡ ಯಕ್ಷಗಾನ ಕಾರ್ಯಕ್ರಮಗಳು**

| | | | |
|---|---|---|---|
| ತಾ. 26.6.2011 | ಓಂ ನಮಃ ಶಿವಾಯ - ಇಂದ್ರಜಿತು | ತಾ. 30.6.2011 | ಲೀಲಾಮೂರ್ತಿ ಶ್ರೀಕೃಷ್ಣ |
| ತಾ. 27.6.2011 | ಮಾಯಾ ಶೂರ್ಪನಕಿ - ಕುಶಲವ | ತಾ. 01.7.2011 | ರಾಣಿ ಶಶಿಪ್ರಭೆ - ಪ್ರಚಂಡ ಭಾರ್ಗವ |
| ತಾ. 28.6.2011 | ಕನ್ಯಾತರಂಗ - ಶ್ರೀನಿವಾಸ ಕಲ್ಯಾಣ | ತಾ. 02.7.2011 | ಚಕ್ರವ್ಯೂಹ - ದಮಯಂತಿ ಪುನಃ ಸ್ವಯಂವರ |
| ತಾ. 29.6.2011 | ಅಮರೇಂದ್ರ ಪದ ವಿಜಯ | ತಾ. 03.7.2011 | ಜ್ವಾಲಾ ಜಾಹ್ನವಿ |

**ಉಚಿತ ಪ್ರವೇಶ**

ಕಲಾಭಿಮಾನಿಗಳು ಹೆಚ್ಚಿನ ಸಂಖೆಯಲ್ಲಿ ಬಂದು ಸಹಕರಿಸಬೇಕಾಗಿ ಕೇಳಿಕೊಳ್ಳುವ ಮುಂಬಯಿ ಸಂಚಾಲಕರು

ಶ್ರೀ ಪ್ರಕಾಶ ಭಟ್ 9867215936

ಶ್ರೀ ರವೀಂದ್ರನಾಥಭುಂಡಾರಿ 9867440579

ಶ್ರೀ ಉಜಿರೆ ಅಶೋಕ ಭಟ್ ( ಮೇಳದ ಮೆನೇಜರ್ )

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ : ಪೇಜಾವರ ಸತ್ಯಾನಂದ ರಾವ್ ( 9158009331 )



*Page Donated by : **Shri Suhas Gunishastri**, Prabhadevi In the memory of his parents **Late Smt. Rajeshwari & Late Shri P. V. Gunishastri**, past President, H.W.T. (Dec.-2011)*

# ಮಹಾರಾಷ್ಟ್ರ ರಾಜ್ಯ ಕನ್ನಡಿಗರ ನಾಲ್ಕನೇಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶ-2011



'ಸಂಸ್ಕೃತಿ ನಮ್ಮ ಬಾಳಿಗೆ ಮಾತೆ ಇದ್ದಂತೆ. ನಮ್ಮ ಜೀವನಕ್ಕೆ ಸದಾ ಬೆಳಕು ನೀಡುವ ಸಂಸ್ಕೃತಿ ನಶಿಸಿ ಹೋಗುವ ಅಪಾಯದ ಸ್ಥಿತಿಯಲ್ಲಿದೆ. ನಮ್ಮ ಅಮೂಲ್ಯವಾದ ಸಂಸ್ಕೃತಿಯು ಇಂದು ಅಪಾಯದ ಅಂಚಿನಲ್ಲಿದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಸಾಹಿತ್ಯ, ಸಂಗೀತ ಹಾಗೂ ವಿವಿಧ ಕಲೆಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಿದೆ' ಎಂದು ಉದ್ಯಮಿ ಮತ್ತು ಸಾಹಿತಿ ವೆಂಕಟರಾವ್ ರಾಜ ನುಡಿದರು. ಅವರು ಜೂನ್ 11ರಂದು ಮಾಟುಂಗಾ ಪಶ್ಚಿಮದ ಕರ್ನಾಟಕ ಸಂಘ ಮುಂಬಯಿಯ ಸಮರಸ ಭವನದಲ್ಲಿ ಮಹಾರಾಷ್ಟ್ರ ರಾಜ್ಯ ಕನ್ನಡಿಗರ ನಾಲ್ಕನೇಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶ-2011ರನ್ನು ಉದ್ಘಾಟಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರೋಹಿತ್‌ದಾಸ್ ನಾಯಕರವರು ದಾದಾಜಿ ಗಾವಿಡ್ ಅವರ ಇಂಗ್ಲಿಷ್ ಮೂಲದ ಆಧ್ಯಾತ್ಮಿಕ ಕೃತಿಯ, ಡಾ। ಸುಮಾ ದ್ವಾರಕಾನಾಥ ಅವರ ಅನುವಾದ 'ವಿಶ್ವಪ್ರಜ್ಞೆಯ ಉದಯ' ಕೃತಿಯನ್ನು ಲೋಕಾರ್ಪಣೆ ಗೊಳಿಸಿ'ನಮ್ಮ ಜ್ಞಾನೋದಯಕ್ಕಾಗಿ ಇಂತಹ ಕೃತಿಗಳ ಲೋಕಾರ್ಪಣೆಯಾಗುವದು ಸಂತೋಷದ ಸಂಗತಿ, ನಮ್ಮ ಭಾಷೆಯೊಡನೆ ಇತರ ಭಾಷೆಯನ್ನು ಗೌರವಿಸುವ ಗುಣ ನಮ್ಮಲ್ಲಿರಬೇಕು' ಎಂದು ಹೇಳಿದರು.

ಸಮಾವೇಶದ ಅಧ್ಯಕ್ಷರಾದ ಸಾಹಿತಿ ಆರ್. ಜೆ. ಕಾಲೇಜು, ಕನ್ನಡ ವಿಭಾಗದ ಮುಖ್ಯಸ್ಥರಾದ ಸಾಹಿತಿ ಕೆ. ರಘುನಾಥ್‌ರವರು 'ಕನ್ನಡವನ್ನು ಕಟ್ಟಲು ಕನ್ನಡವನ್ನು ಪ್ರೀತಿಸುವುದು ಅಗತ್ಯ, ಆದರೆ ಕೇವಲ ಭಾವನಾತ್ಮಕವಾಗಿ ಮಾತನಾಡಿದರೆ ಸಾಲದು ಕನ್ನಡಕ್ಕೆ ಅನ್ನವನ್ನು ಕೊಡುವ ಶಕ್ತಿ ಬೆಳೆದು ಬರಬೇಕು' ಎಂದು ನುಡಿದರು. ಕರ್ನಾಟಕ ಸಂಘದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷರಾದ ಸುಶೀಲಾ ದೇವಾಡಿಗರವರು ಪ್ರಾರ್ಥನೆಗೈದರು. ಶಿವಮೊಗ್ಗಾ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಸಂಗಮೇಶ್ವರವರು 'ಮುಂಬಯಿ ಮಿಡಿತ' ಕೃತಿಯನ್ನು ಬಿಡಿಗಡೆಗೊಳಿಸಿದರು. 'ಇದೊಂದು ಸಂಗ್ರಹಯೋಗ್ಯವಾದ ಕೃತಿ' ಎಂದು ಬಣ್ಣಿಸಿದರು.ಕ.ಸಾ.ಪ. ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಎಚ್.ಬಿ.ಎಲ್. ರಾವ್‌ರವರು ಪ್ರಸ್ತಾವಿಕವಾಗಿ ಮಾತನಾಡಿ ಅತಿಥಿಗಣ್ಯರನ್ನು ಶಾಲು ಹೊದೆಸಿ ಸಿಹಿತಿಂಡಿಯನ್ನು ನೀಡಿ ಗೌರವಿಸಿದರು. ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ಜಿ. ಡಿ. ಜೋಶಿಯವರು ಸ್ವಾಗತಿಸಿದರು ಶ್ರೀಮತಿ ಅಮಿತಾ ಭಾಗವತ್ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಸಮಾರಂಭದ ಪೂರ್ವಭಾವಿ ಕಾರ್ಯಕ್ರಮವಾಗಿ ವಸುಮತಿ ಉಡುಪ ರಚಿಸಿರುವ ಡಾ. ಭರತ್‌ಕುಮಾರ್ ಪೊಲಿಪು ನಿರ್ದೇಶಿಸಿರುವ ಮೃಗತೃಷ್ಣಾ ನಾಟಕವು ಪ್ರದರ್ಶನಗೊಂಡಿತು. ಸಮಾವೇಶದ ಅಂಗವಾಗಿ ವಿವಿಧ ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಗೊಂಡವು. ಜೂನ್ 12ರ ಪೂರ್ವಾಹ್ನದಲ್ಲಿ ಕವಿ, ಕಥೆಗಾರ 'ಗಂಗಾಧರ ಪಣಿಯೂರ್' ಇವರ ಅಧ್ಯಕ್ಷತೆಯಲ್ಲಿ ಕವಿ ಸಮ್ಮೇಳನವು ಜರುಗಿತು. ಸಮಾರೋಪ ಸಮಾರಂಭದಲ್ಲಿ ಡಾ. ಭರತ್‌ಕುಮಾರ ಪೊಲಿಪುರವರನ್ನು ಹಾಗೂ 50 ವರ್ಷಗಳಿಂದ ಜನಸೇವೆಯಲ್ಲಿ ನಿರತರಾದ ಸಂಘ-ಸಂಸ್ಥೆಗಳನ್ನು ಸನ್ಮಾನಿಸಲಾಯಿತು. ●


**SUVITEK INTERNATIONAL**

**Authorised Dealers for :**
**ARMSTRONG, INTERARCH, CRIL**

★ PRE-ENGINEERED BUILDINGS
★ ROOFINGS
★ WALL CLADDINGS
★ THERMAL INSULATIONS
★ FALSE CEILINGS
★ FALSE FLOORINGS
★ BLINDS
★ SIGNAGES

◆

5/98, Jayvijay Society, Sahar Road,
Mumbai-400 099 India
Tel. : 2834 2952 ● Fax : 2824 8794
E-mail : suvitek@gmail.com

ADVT.



UIL

**UGRU INDUSTRIES**

*With Best Compliments from*

**UGRU INDUSTRIES**
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.


*PAGE DONATED BY : **SMT. TRIVENI BHATSHIKAR & SHRI R. T. BHATSHIKAR**, GHATKOPAR IN THE MEMORY OF **LATE SHRI T. R. BHATSHIKAR** (DEC.-2009)*

# ಸುಂದರ ಕಾಂಡ

*(ಹಿಂದಿನ ಸಂಚಿಕೆಯಿಂದ)*

11) ಸೂಕ್ಷ್ಮರೂಪದಿ ಅನಿಲ ಕುಮಾರನು
ಸುರಸೆಯ ಬಾಯಿಯ ಹೊಕ್ಕು ಹೊರಟನು।
ಚತುರ ಹನುಮನ ಚಮತ್ಕಾರವನು
ಕಂಡು ದೇವಗಣ ಸಂತಸಗೊಂಡಿತು ।।ಸು।।

12) ಶರೀರ ಛಾಯೆಯ ಎಳೆವ ರಕ್ಕಸಿ
ಸಿಂಹಿಕಾಳನ್ನು ಸಂಹರಿಸಿದನು ।
ಸಾಗರ ತೀರವ ಸೇರಿದನು
ಅತಿ ವೇಗದಿ ವೀರ ಹನುಮಾನನು ।।ಸು।।

13) ತ್ರಿಕೂಟ ಪರ್ವತ ಶಿಖರದಲ್ಲಿಳಿದು
ಲಂಕೆಯ ಸೇರಿದ ವಾನರ ಧೀರ।
ಜಯಿಸಿ ಲಂಕಿಣಿಯ, ರಾವಣನರಮನೆ
ಮೂಲೆ ಮೂಲೆಯನು ಹುಡುಕಿದನು ।।ಸು।।

14) ಕಟ್ಟಡಗಳನು ಗೋಪುರಗಳನು
ಅರಸಿದ ಅಂತಃಪುರ ಭವನಗಳನು।
ಜಾನಕಿ ಓಡು ಸಿಗಲಿಲ್ಲ
ಹನುಮನ ಹುಡುಕಾಟಕೆ ಕೊನೆಯಿಲ್ಲ ।।ಸು।।

15) ಅಶೋಕ ವನದಲ್ಲಿ ವೃಕ್ಷದ ಕೆಳಗೆ
ರಕ್ಕಸಿ ವೃಂದದ ಗುಂಪಿನ ಒಳಗೆ ।
ಬಳಲಿ ಬಳಲಿ ಬೆಂಡಾಗಿರುವ
ಸೀತಾ ಮಾತೆಯ ನೋಡಿದನು ।।ಸು।।

16) ಅತಿ ದುಃಖದಲ್ಲಿದ್ದ ಜಾನಕಿಯನ್ನು
ಭಾದಿಸುತ್ತಿದ್ದ ದಶಮುಖನನ್ನು ।
ಸೂಕ್ಷ್ಮರೂಪದಲಿ ವೃಕ್ಷದಲಿದ್ದ
ಹನುಮನು ಕಂಡನು ಉದ್ವೇಗದಿಂದ ।।ಸು।।

17) ಮಂಡೋದರಿಯು ಧರ್ಮವ ತಿಳಿಸಲು
ಲಂಕೇಶನ ಕಿವಿ ಕಿವುಡಾಗಿತ್ತು।
ಮನಸು ಬದಲಿಸು ಎನ್ನನು ವರಿಸು
ಒಂದು ಮಾಸದ ಗಡುವು ಎಂದನು ।।ಸು।।

18) ರಕ್ಕಸಿ ಹೆಂಗಳು ಕಠಿಣ ಪದಗಳು
ರಾಮನ ಸತಿಯ ಭಾದಿಸುತಿರಲು ।
ತ್ರಿಜಟೆ ಎಂಬ ಒಬ್ಬಳು ರಕ್ಕಸಿ
ತನ್ನ ಸ್ವಪ್ನ ಅರುಹಿದಳು ।।ಸು।।

19) ಲಂಕಾ ರಾಜಾನು ಸೋತು ಹೋದನು
ರಾಮಚಂದ್ರನು ವಿಜಯಿಯಾದನು।
ರಕ್ಕಸಿಯರೆಲ್ಲ ಭಯಭೀತರಾದರು
ಸೀತೆಯ ಪಾದಕೆ ಮಣಿದು ಬಿದ್ದರು ।।ಸು।।

20) ರಾಮಚಂದ್ರನ ಗುಣರೂಪಗಳ
ಗಾನವ ಹಾಡಿದ ಹನುಮಯ್ಯ ।
ರಾಮದೂತ ತಾನೆಂದು
ನಿಜರೂಪವನು ತೋರಿಸಿದ ।।ಸು।। *(ಮುಂದವರಿಯುವುದು)*

*ಮೂಲ : ತೆಲುಗು* *ಕನ್ನಡಕ್ಕೆ ಅನುವಾದ :* ಶ್ರೀಮತಿ ದೇವಿ ಭಟ್



# ಚಿಂತನ - ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

## ಅಲ್ಪವೇ ಭೂಮವಾಗಬಹುದು

ಇತ್ತೀಚೆಗೆ ನನ್ನ ಮಿತ್ರನೋರ್ವನ ಸಂಗಡ ನಗರ ಸಭೆಯ ಕಛೇರಿಗೆ ಹೋಗಿದ್ದೆ. ನನ್ನ ಮಿತ್ರನಿಗೆ ಈ ವರ್ಷದ ಮನೆಯ ಕರ ಕೊಡಬೇಕಾಗಿತ್ತು. ಸ್ವತಃ ತಾವೇ ತಮ್ಮ ಮನೆಯ ಮೌಲ್ಯಮಾಪನ ಮಾಡಿ ಕರತುಂಬಲು ನಿಗದಿಪಡಿಸಿದ ಫಾರ್ಮ್ ತೆಗೆದುಕೊಂಡ. ನಂತರ ಹೊರಗೆ ಬಂದೊಡನೆ ಓರ್ವ ನಿರುದ್ಯೋಗಿ ಪದವೀಧರನೊಬ್ಬ ಹೊರಗಡೆ ಒಂದು ಸ್ಟೂಲಿನ ಮೇಲೆ ಕುಳಿತಿರುವದನ್ನು ಕಂಡು ಅವನನ್ನು ವಿಚಾರಿಸಿದ. ಆ ಯುವಕನು ತಾನು ಕರ ಭರಣ ಮಾಡುವ ಫಾರ್ಮನ್ನು ಕರದಾತರಿಗೆ ತುಂಬಿಕೊಡುವ ಕೆಲಸ ಮಾಡುವದಾಗಿಯೂ, ದಿನಕ್ಕೆ 200 ರೂಪಾಯಿಂದ 300 ರೂಪಾಯಿ ದೊರಕುವದೆಂದೂ ಹೇಳಿದ. ನನ್ನ ಮಿತ್ರನು ತಡಮಾಡದೆ ತನ್ನ ಫಾರ್ಮನ್ನು ಅವನಿಂದ ತುಂಬಿಸಿಕೊಂಡು ಅವನ ಫೀಕೊಟ್ಟ. ನಾನು ಅವನನ್ನು ಕೇಳಿದೆ. ಈ ಫಾರ್ಮನ್ನು ನಾವೇ ತುಂಬಿಕೊಳ್ಳುವಷ್ಟು ಸುಲಭವಾಗಿದೆ. ನೀನೇಕೆ ಅವನಿಂದ ತುಂಬಿಸಿಕೊಂಡೆ? ಆಗ ಅವನೆಂದ. "ಆ ಹುಡುಗ ಪದವೀಧರ, ಅಲ್ಲದೆ ನಿರುದ್ಯೋಗಿ, ಅವನಿಗೆ ಕೆಲಸವೂ ಸಿಕ್ಕಿದಂತಾಯಿತು. ಮತ್ತು ದುಡಿಮೆಯೂ ಆಯಿತಲ್ಲವೇ? ನನ್ನ ಕೈಯಿಂದ ಕೊಟ್ಟದ್ದು. ಅತ್ಯಲ್ಪ ಹಣ. ಆದರೆ ಅವನಿಗೆ ಅದೊಂದು ಸಹಾಯವಲ್ಲವೇ?" ಎಂದು ಹೇಳಿದ.

ಸದ್ಗುರುವೊಬ್ಬರು ತಾನೇ ನಡೆಸುತ್ತಿರುವ ಕಾಲೇಜು ವಿದ್ಯಾರ್ಥಿಗಳನ್ನು ಕರೆದುಕೊಂಡು ಊಟಿಯಲ್ಲಿ ತಿರುಗಾಡಲು ಹೋದರಂತೆ. ರಸ್ತೆಯ ಪಕ್ಕದಲ್ಲಿ ಕುಳಿತು ಸ್ಕಾರ್ಫ್ ಮಾರುತ್ತಿದ್ದ ಬಡ ವ್ಯಾಪಾರಿಯಿಂದ ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾರ್ಫ್ ಕೊಡಿಸಿದರಂತೆ. ಹೀಗೇಕೆ ಮಾಡಿದಿರಿ? ಎಂದು ಕೇಳಿದಾಗ, "ಅವನ ಕುಟುಂಬ ದೊಡ್ಡದು. ಮನೆಯವರನ್ನೆಲ್ಲರನ್ನೂ ನೋಡಿಕೊಳ್ಳುವ ಜವಾಬ್ದಾರಿ ಅವನ ಮೇಲಿದೆ. ಅಲ್ಲದೆ ಊಟಿಗೆ ಬರುವ ಪ್ರವಾಸಿಗರು ಶ್ರೀಮಂತರು. ಅವರು ಅಂಗಡಿಗಳಲ್ಲಿ ಖರೀದಿಸುತ್ತಾರೆ. ಈ ಬಡ ವ್ಯಾಪಾರಿಗೆ ಸ್ವಲ್ಪ ಸಹಾಯವಾಗಲಿ ಎಂದು ಹಾಗೆ ಮಾಡಿದೆ" ಎಂದರಂತೆ.

ಜಾನ್ಸನ್ನನ ಬ್ಯಾಂಡೇಡ್ ನಾವೆಲ್ಲ ನೋಡಿದ್ದೇವೆ. ಜಾನ್ಸನ್ನನ ಮನೆಯಲ್ಲಿ ಯಾರಿಗೋ ಒಂದು ಘಾಯವಾಯಿತಂತೆ, ಘಾಯದ ಮೇಲೆ ಉದ್ದುದ್ದ ಬಟ್ಟೆ ತುಂಡನ್ನು ಕಟ್ಟುವದನ್ನು ಅವನು ನೋಡಿದ್ದ. ಅಷ್ಟು ಸಣ್ಣ ಘಾಯಕ್ಕೆ ಸಣ್ಣ ಬಟ್ಟೆಯ ಚೂರು ಸಾಕಾಗುವದಲ್ಲವೇ? ಎಂದು ಆಲೋಚಿಸಿ ಬಟ್ಟೆಯ ಚೂರಿಗೆ ಅಂಟು ಹಚ್ಚಿ ಮಧ್ಯದಲ್ಲಿ ಸ್ವಲ್ಪ ಮುಲಾಮುತಾಗಿಸಿ ಘಾಯದ ಮೇಲೆ ಇಟ್ಟು ಅದು ಅಲ್ಲಿಯೇ ಇರುವಂತೆ ಮಾಡಿದ. ಈ ವಿಷಯವನ್ನು ತನ್ನ ನೆರಮನೆಯವರಿಗೂ ಹೇಳಿದ. ಅವನು ಬಡವನಾದುದರಿಂದ ಅದಕ್ಕೆ ಬೇಕಾಗುವ ಸಾಮಾನು ಕೊಂಡುಕೊಳ್ಳುವುದೂ ಕಷ್ಟವಾಗಿತ್ತು. ಆದರೂ ಕಷ್ಟದಿಂದ ಸಾಮಾನು ಖರೀದಿಸಿ ಹತ್ತೊ ಇಪ್ಪತ್ತೋ ತಯಾರಿಸಿದಾಗ ಕೊಳ್ಳುವವರಿರಲಿಲ್ಲ. ಆದರೆ ನೆರಮನೆಯವನಿಗೆ ಇದೊಂದು ಕ್ರಾಂತಿಯನ್ನೇ ಮಾಡಬಹುದೆಂದು ಸ್ವಲ್ಪ ಸಹಾಯ ಮಾಡಿದ. ಆ ಅಲ್ಪ ಸಹಾಯದಿಂದ ಈಗ ಬ್ಯಾಂಡ್ ಏಡ್ (Band aid) ಅನೇಕ ಅವಿಷ್ಕಾರ ಹೊಂದಿ ಜಗತ್ತಿನ ಪ್ರತಿಯೊಬ್ಬನ ಮನೆಯಲ್ಲೂ ದೊರಕುವಂತಾಗಿದೆ. ಅನೇಕ ಬಾರಿ ನಾವು ಇದರಿಂದೇನಾಗುವದೆಂದು ಸಣ್ಣದನ್ನು ನಿರ್ಲಕ್ಷಿಸುತ್ತೇವೆ. ಅಲ್ಪವೇ ಭೂಮವಾಗಬಹುದಲ್ಲವೇ? ಚಿಕ್ಕ ಸಹಾಯ, ಸಹಾನುಭೂತಿ ವ್ಯಕ್ತಿಯನ್ನು ಎತ್ತರಕ್ಕೆ ಒಯ್ಯಬಹುದಲ್ಲವೇ? ●

*PAGE DONATED BY :* ***SHRI V. G. BHAT, NIGDI*** *(DEC.-2011)*

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*( ಹಿಂದಿನ ಸಂಚಿಕೆಯಿಂದ )*

**ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು**

ಬೇಚರ್‌ಜೀ ಸ್ವಾಮೀಜೀಯವರು ಮೊದಲು ಮೋಢ್ ಬನಿಯಾ ಆಗಿದ್ದು, ಆ ಮೇಲೆ ಜೈನ ಸಂನ್ಯಾಸಿ ಆದರು. ಜೋಷೀಜೀಯವರಂತೆ ಅವರೂ ನಮ್ಮ ಕುಟುಂಬಕ್ಕೆ ತುಂಬಾ ಆಪ್ತರಾಗಿದ್ದರು. ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಅವರು ನನ್ನ ನೆನಪಿಗೆ ಬಂದರು. ನಾನು ಇವನಿಂದ ಮೂರು ಪ್ರತಿಜ್ಞೆ ಮಾಡಿಸುತ್ತೇನೆ. ಆ ಮೇಲೆ ಇವನನ್ನು ವಿಲಾಯಿತಿಗೆ ಕಳಿಸಬಹುದು ಎಂದು ಅವರು ಹೇಳಿದರು. 'ಮಾಂಸ, ಮದಿರೆ-ಮಹಿಳೆಯರನ್ನು ಎಂದೂ ಮುಟ್ಟುವುದಿಲ್ಲ' ಎಂದು ಶಪಥ ಮಾಡಿದೆ. ಆನಂತರ ನನಗೆ ತಾಯಿಯ ಅನುಮತಿ ಸಿಕ್ಕಿತು. ಪ್ರೌಢ ಶಾಲೆಯಲ್ಲಿ ನನಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದ್ದರು. ರಾಜಕೋಟೆಯ ಹುಡುಗನೊಬ್ಬ ಇಂಗ್ಲೆಂಡಿಗೆ ಹೋಗುವುದು ಸಾಮಾನ್ಯ ವಿಷಯವಾಗಿರಲಿಲ್ಲ. ನಾನು ಕೃತಜ್ಞತೆ ಸೂಚಿಸಲು ಕೆಲವು ಮಾತುಗಳನ್ನಾಡಬೇಕೆಂದು ಬರೆದುಕೊಂಡು ಹೋಗಿದ್ದೆ. ಆದರೆ ಅದನ್ನು ಓದುವುದು ನನಗೆ ಸಾಧ್ಯವಾಗಲೇ ಇಲ್ಲ. ಓದಲು ಎದ್ದು ನಿಂತಾಗ ಇಡೀ ಶರೀರ ಹೆದರಿಕೆಯಿಂದ ಕಂಪಿಸಲಾರಂಭಿಸಿತು. ನಾನು ಒಂದು ಮಾತನಾಡದೆ ಸುಮ್ಮನೆ ಕುಳಿತದ್ದು ಇಂದಿಗೂ ನೆನಪಿದೆ.

ತಾಯಿಯ ಅನುಮತಿ, ಆಶೀರ್ವಾದ, ಅಣ್ಣನ ಶುಭ ಹಾರೈಕೆಗಳೊಂದಿಗೆ ನಾನು ನನ್ನ ಹೆಂಡತಿ ಹಾಗೂ ಚಿಕ್ಕ ಮಗುವನ್ನು ಬಿಟ್ಟು ಮುಂಬಯಿಗೆ ಪ್ರಯಾಣ ಬೆಳೆಸಿದೆ.

## ಜಾತಿ ಬಹಿಷ್ಕಾರ

ಜೂನ್-ಜುಲೈಯಲ್ಲಿ ಸಮುದ್ರದಲ್ಲಿ ಭಾರೀ ಉಬ್ಬರವಿರುತ್ತದೆ. ಯಾವುದೋ ಒಂದು ಹಡಗು ಬಿರುಗಾಳಿಯಿಂದ ಮುಳುಗಿ ಹೋಗಿದೆ. ಈತ ಇದೇ ಮೊದಲ ಬಾರಿಗೆ ಸಮುದ್ರಯಾನ ಮಾಡುತ್ತಿರುವುದರಿಂದ ನವೆಂಬರ್‌ನಲ್ಲಿ ಕಳಿಸುವುದು ಒಳ್ಳೆಯದು ಎಂದು ಯಾರೋ ಕೆಲವು ಸ್ನೇಹಿತರು ನನ್ನ ಅಣ್ಣನಿಗೆ ಹೇಳಿದರು. ಚಿಂತೆಗೊಳಗಾದ ಆತ ನನ್ನನ್ನು ಒಬ್ಬ ಸ್ನೇಹಿತರ ಮನೆಯಲ್ಲಿ ಬಿಟ್ಟು, ರಾಜಕೋಟೆಗೆ ಹಿಂತಿರುಗಿದನು. ನಮ್ಮ ಜಾತಿಯ ಜನಕ್ಕೆ ನೀನು ವಿದೇಶ ಪ್ರಯಾಣ ಮಾಡುವುದು. ಹಿಡಿಸಲಿಲ್ಲ. ಅವರು ಈ ವಿಷಯದಲಿ ಅನಗತ್ಯ ಗೊಂದಲ ಎಬ್ಬಿಸಿದರು. ಅಲ್ಲಿಯವರೆಗೆ ಮೋಢ್ ಬನಿಯರ ಪೈಕಿ ಯಾರೂ ವಿದೇಶಕ್ಕೆ ಹೋಗಿರಲಿಲ್ಲ. ಅವರೆಲ್ಲಾ ಪಂಚಾಯಿತಿ ಸೇರಿಸಿ, ಸಭೆ ಮುಂದೆ ಹಾಜರಾಗಲು ನನಗೆ ಕರೆಕಳುಹಿಸಿದರು. ನಾನು ಒಂದಿಷ್ಟೂ ಅಳುಕಿಲ್ಲದೆ ಸಭೆಯ ಮುಂದೆ ಹಾಜರಾದೆ. ಅಂಥ ಧೈರ್ಯ ನನಗೆ ಅದು ಹೇಗೆ ಬಂತೋ ಗೊತ್ತಿಲ್ಲ. ನನಗೆ ಸ್ವಲ್ಪ ಕೂಡ ಹಿಂಜರಿಕೆ ಇರಲಿಲ್ಲ, ಶಂಕೆಯೂ ಇರಲಿಲ್ಲ. ಜಾತಿಯ ಮುಖಂಡರು ನಮ್ಮ ದೂರದ ಬಂಧುವೂ ಆಗಿದ್ದರು. ನಮ್ಮ ತಂದೆಯ ಜೊತೆ ಅವರ ಬಾಂಧವ್ಯ ಉತ್ತಮವಾಗಿತ್ತು. ನಾನು ಇಂಗ್ಲೆಂಡಿಗೆ ಹೋಗುವುದು ಸರಿಯಲ್ಲ ಎಂಬುದು ಜಾತಿಯವರ ಅಭಿಪ್ರಾಯ ಅಲ್ಲಿ ನಮ್ಮ ಧರ್ಮಪಾಲನೆ ಸಾಧ್ಯವಿಲ್ಲ. ಇಂಗ್ಲಿಷರ ಜೊತೆ ಕುಡಿಯುವುದು, ತಿನ್ನುವುದು ಮಾಡಲೇ ಬೇಕಾಗುತ್ತದೆ ಎಂದು ಅವರು ಹೇಳಿದರು. 'ವಿದೇಶಕ್ಕೆ ಹೋಗುವುದು ಯಾವುದೇ ರೀತಿಯಲ್ಲೂ ಧರ್ಮಬಾಹಿರವಲ್ಲ. ನಾನಲ್ಲಿಗೆ ಹೋಗುತ್ತಿರುವುದು ವಿದ್ಯಾಭ್ಯಾಸವನ್ನು ಮುಂದುವರಿಸಲು. ಮಾಂಸ, ಮದಿರೆ, ಮಹಿಳೆಯರನ್ನು ಮುಟ್ಟುವುದಿಲ್ಲವೆಂದು ನಾನು ಈಗಾಗಲೇ ನಮ್ಮ ತಾಯಿಗೆ ಮಾತಿ ಕೊಟ್ಟಿದ್ದೇನೆ. ಆ ಮಾತನ್ನು ಖಂಡಿತಾ ಉಳಿಸಿಕೊಳ್ಳುತ್ತೇನೆ' ಎಂದು ನಾನು ಪ್ರತ್ಯುತ್ತರವಿತ್ತೆ.

'ನನಗೂ ನಿಮ್ಮ ತಂದೆಗೂ ಎಂತಹ ಸಂಬಂಧ ಇತ್ತೆಂಬುದು ಗೊತ್ತಿರಬಹುದು. ನೀನು ನನ್ನ ಮಾತನ್ನು ಗೌರವಿಸಬೇಕು, ವಿಲಾಯಿತಿಗೆ ಹೋಗಬಾರದು' ಎಂದು ಅವರು ಹೇಳಿದರು.

'ಹೌದು ನೀವು ನನಗೆ ಪಿತೃಸಮಾನರು. ನಿಮ್ಮಲ್ಲಿ ನನಗೆ ತುಂಬಾ ಗೌರವವಿದೆ. ಆದರೆ ಈ ವಿಷಯದಲ್ಲಿ ಮಾತ್ರ ನಾನು ಅಸಹಾಯಕ. ವಿದೇಶದಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ನಿರ್ಧರಿಸಿ ಬಿಟ್ಟಿದ್ದೇನೆ. ಅದಕ್ಕೆ ನಮ್ಮ ತಾಯಿ, ಅಣ್ಣನವರ ಅನುಮತಿಯೂ ಸಿಕ್ಕಿದೆ. ದಯವಿಟ್ಟು ಕ್ಷಮಿಸಿ' ಎಂದೆ ನಾನು.

ನನ್ನ ಮಾತಿನಿಂದ ಅವರು ಕೆರಳಿ ಕೆಂಡವಾಗಿ ನನ್ನನ್ನು ದುರುಗುಟ್ಟಿ ನೋಡಲಾರಂಭಿಸಿದರು. ನಾನು ಒಂದಿಷ್ಟೂ ವಿಚಲಿತನಾಗದೆ ಕುಳಿತಿದ್ದೆ. 'ಪಂಚಾಯಿತಿಯ ಅಪ್ಪಣೆಯನ್ನು ಪಾಲಿಸದ ಈ ಹುಡುಗ ಇಂದಿನಿಂದ ಜಾತಿಯಿಂದ ಬಹಿಷ್ಕೃತನಾಗಿದ್ದಾನೆ. ಇವನಿಗೆ ಸಹಾಯ ಮಾಡುವವರನ್ನೂ ಜಾತಿಯಿಂದ ಬಹಿಷ್ಕರಿಸಿ, ಒಂದೂಕಾಲು ರೂ. ದಂಡ ವಿಧಿಸಲಾಗುವುದು' ಎಂದು ಅವರು ತೀರ್ಪಿತ್ತರು.

ಇದರಿಂದ ನನ್ನ ಮೇಲೆ ಯಾವುದೇ ರೀತಿಯ ಪರಿಣಾಮವಾಗಲಿಲ್ಲ. ನಾನು ಅವರಿಂದ ಬೀಳ್ಕೊಂಡೆ. ಇನ್ನೂ ನಮ್ಮ ಅಣ್ಣ ಏನನ್ನುತ್ತಾನೋ ಎಂಬ ಆತಂಕ ನನಗಿತ್ತು. ಆದರೆ ಅವನೂ ದೃಢಮನಸ್ಕನಾಗಿದ್ದ. ಜಾತಿಯವರು ಏನೇ ಹೇಳಲಿ. ನಿನ್ನ ವಿದೇಶ ಪ್ರಯಾಣಕ್ಕೆ ನನ್ನ ಸಹಮತವಿದೆ ಎಂದು ಹೇಳಿ ಆತ ನನ್ನನ್ನು ಹುರಿದುಂಬಿಸಿದ. ನಾನು ಚಿಂತೆಯಲ್ಲೇ ದಿನ ದೂಡುತ್ತಿರುವಾಗ. ಜುನಾಗಢದ ತ್ರಯಂಬಕ ರಾಯ್ ಮಜುಂದಾರ್ ಎಂಬ ವಕೀಲನೊಬ್ಬರು ಬ್ಯಾರಿಸ್ಟರ್ ಆಗಲು ಸೆಪ್ಟಂಬರ್ ನಾಲ್ಕರಂದು ಹಡಗಿನಲ್ಲಿ ವಿಲಾಯಿತಿಗೆ ಹೊರಟಿರುವ ವಿಷಯ ಗೊತ್ತಾಯಿತು. ಕುಟುಂಬದ ಮಿತ್ರರೊಬ್ಬರು ಇಂಥ ಅವಕಾಶವನ್ನು ಬಿಡಬೇಡ. ಅವರ ಜೊತೆಯಲ್ಲೆ ಹೊರಟುಬಿಡು ಎಂದ ಹೇಳಿದ್ದಷ್ಟೇ ಅಲ್ಲದೆ ತ್ರಯಂಬಕ ರಾಯ್ ಮಜುಂದಾರ್ ಅವರ ಕ್ಯಾಬಿನ್‌ನಲ್ಲೇ ನನಗೂ ಸ್ಥಳ ಕಾದಿರಿಸಿದರು. ಅಷ್ಟೇ ಅಲ್ಲ, ನನ್ನ ವಿಷಯವನ್ನು ಅವರಿಗೆ ಹೇಳಿ ಸ್ವಲ್ಪ ನೋಡಿಕೊಳ್ಳಬೇಕೆಂದು ಕೋರಿದರು. ಮಜುಂದಾರ್ ಪ್ರಾಯ ಮೀರಿದ, ಅನುಭವಶಾಲೀ ಗೃಹಸ್ಥರಾಗಿದ್ದರು. ನಾನೋ ಪ್ರಪಂಚದ ಅನುಭವವಿಲ್ಲದ ೧೮ರ ನವ ತರುಣ. ಅವರು ನನ್ನ ಬಗ್ಗೆ ನಿಶ್ಚಿಂತೆಯಾಗಿರುವಂತೆ ನಮ್ಮ ಮಿತ್ರರಿಗೆ ಆಶ್ವಾಸನೆ ಇತ್ತರು.

ಹೀಗೆ ೧೮೮೮ರ ಸೆಪ್ಟೆಂಬರ್ ನಾಲ್ಕನೇ ತಾರೀಖು ನಾನು ಮುಂಬಯಿಯಿಂದ ವಿದೇಶಕ್ಕೆ ಪ್ರಯಾಣ ಬೆಳೆಸಿದೆ.

ಹಡಗಿನಲ್ಲಿ ನನಗೆ ಯಾವುದೇ ರೀತಿಯ ತೊಂದರೆಯಾಗಲಿಲ್ಲ. ನನಗೆ ಇಂಗ್ಲಿಷ್‌ನಲ್ಲಿ ಮಾತನಾಡುವ ಅಭ್ಯಾಸವಿರಲಿಲ್ಲ. ಮಜುಂದಾರ ಅವರನ್ನು ಬಿಟ್ಟರೆ ಹಡಗಿನಲ್ಲಿ ಇಂಗ್ಲಿಷರೇ. ನನಗೆ ಅವರೊಂದಿಗೆ ಬೆರೆಯುವುದಕ್ಕೂ ಸಂಕೋಚವಾಗುತ್ತಿತ್ತು. ಅವರಾಡುವ ಮಾತುಗಳು ನನಗೆ ಅರ್ಥವಾಗುತ್ತಿರಲಿಲ್ಲ. ಅರ್ಥವಾದರೂ ಏನು ಉತ್ತರ ಕೊಡಬೇಕೆಂಬುದು ಥಟ್ಟನೇ ಹೊಳೆಯುತ್ತಿರಲಿಲ್ಲ. ಪ್ರತಿಯೊಂದು ವಾಕ್ಯವನ್ನೂ ನಾನು ಮೊದಲೇ ಮನಸ್ಸಿನಲ್ಲಿ ಜೋಡಿಸಿಕೊಂಡು, ಆಮೇಲೆ ಉತ್ತರವಾಗಿರುತ್ತಿತ್ತು. ಹಾಗಾಗಿ ನಾನು ಸಾಧ್ಯವಾದಷ್ಟೂ ಮಾತನಾಡುವುದನ್ನೇ ತಪ್ಪಿಸಿಕೊಳ್ಳುತ್ತಿದ್ದೆ. ಆಹಾರದ ವಿಷಯದಲ್ಲೂ ಹಾಗೇ. ನನಗೆ ಚಾಕು ಫೋರ್ಕುಗಳನ್ನು ಬಳಸುವುದು ಗೊತ್ತಿರಲಿಲ್ಲ. ಯಾವುದು ಮಾಂಸಾಹಾರ, ಯಾವುದು ಸಸ್ಯಹಾರ ಎಂದು ವಿಚಾರಿಸುವ ಎದೆಗಾರಿಕೆಯೂ ಇರಲಿಲ್ಲ. ಹಾಗಾಗಿ ನಾನು ಊಟದ ಮೇಜಿನತ್ತ ತಲೆಯನ್ನು ಹಾಕುತ್ತಿರಲಿಲ್ಲ. ಹಾಗಾಗಿ ಕ್ಯಾಬಿನ್‌ನಲ್ಲೇ ಊಟ ಮುಗಿಸುತ್ತಿದ್ದೆ. ನನ್ನೊಂದಿಗೆ ಒಯ್ದಿದ್ದ ಸಿಹಿ ಪದಾರ್ಥಗಳು, ಹಣ್ಣುಗಳೇ ನನ್ನ ಭೋಜನವಾಗಿತ್ತು. ಆದರೆ ಮಜುಂದಾರರಿಗೆ ಯಾವುದೇ ರೀತಿಯ ಸಂಕೋಚವಿರಲಿಲ್ಲ. ಅವರು ಎಲ್ಲರೊಂದಿಗೂ ಮುಕ್ತವಾಗಿ ಬೆರೆಯುತ್ತಿದ್ದರು. ಡೆಕ್‌ನಲ್ಲೆಲ್ಲಾ ಸ್ವತಂತ್ರವಾಗಿ ತಿರುಗಾಡುತ್ತಿದ್ದರು. ನಾನು ಹಗಲೆಲ್ಲಾ ಕೋಣೆಯಲ್ಲೇ ಅವಿತಿರುತ್ತಿದ್ದೆ. ಜನ ಸಂದಣಿ ಕಡಿಮೆಯಾದಾಗ ಮಾತ್ರ ಡೆಕ್‌ಗೆ ಹೋಗುತ್ತಿದ್ದೆ. 'ವಕೀಲಿ ವೃತ್ತಿಗೆ ಮಾತೇ ಬಂಡವಾಳ, ಎಲ್ಲರೊಂದಿಗೂ ಸೇರು. ಇಂಗ್ಲಿಷ್ ನಮ್ಮ ಮಾತೃಭಾಷೆಯೇನೂ ಅಲ್ಲ. ಮಾತನಾಡುವಾಗ ತಪ್ಪುಗಳಾಗುವುದು ಸಹಜ. ಅಂದ ಮಾತ್ರಕ್ಕೆ ಹಿಂಜರಿಯಬೇಕಾಗಿಲ್ಲ. ಮಾತನಾಡಲು ಸಿಕ್ಕ ಪ್ರತಿಯೊಂದುಅವಕಾಶವನ್ನೂ ಒದಗಿಸಿಕೊಳ್ಳಬೇಕು. ಆಡುತ್ತಾ ಆಡುತ್ತಾ ನಿನಗೇ ಭಾಷೆಯ ಮೇಲೆ ಪ್ರಭುತ್ವ ಸಿದ್ಧಿಸುತ್ತದೆ' ಎಂದು ಮಜುಂದಾರರು ನನಗೆ ತಿಳುವಳಿಕೆ ಹೇಳುತ್ತಿದ್ದರು. ಆದರೆ ಏನೇ ಆದರೂ ನನ್ನ ಸಂಕೋಚ ಮಾತ್ರ ಕಡಿಮೆಯಾಗಲಿಲ್ಲ.

*(ಮುಂದುವರಿಯುವುದು)*

# ಭಾಗವತ ಮಹಾತ್ಮೆ

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ| ವಸಂತ ಭಾಗವತ ವೀಣೆ**

***( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )***

ಆಗ ರಾತ್ರಿ ಆಯಿತು. ಶ್ರೀಕೃಷ್ಣನನ್ನು ಶೋಧಿಸುತ್ತ ಶೋಧಿಸುತ್ತ ಎಲ್ಲರೂ ದಣಿದಿದ್ದರಿಂದ ಅವರು ಮನೆಗೆ ಹೋಗದೆ ಹಸಿವೆ ನೀರಡಿಕೆಯಿಂದ ವ್ಯಾಕುಲರಾಗಿ ಯಮುನೆಯ ತೀರದಲ್ಲಿಯೇ ಶ್ರಮದಿಂದ ಮಲಗಿ ಬಿಟ್ಟರು. ಆಗ ಅಲ್ಲಿ ಆಕಸ್ಮಾತ್ ಭಯಂಕರ ಕಾಳ್ಗಿಚ್ಚು ಸುತ್ತುಗಟ್ಟಿತು. ಸರ್ವ ಜನರು ಭಯದಿಂದ ಹೆದರಹತ್ತಿದರು. "ಕೃಷ್ಣಾ, ಈ ದಾವಾಗ್ನಿಯು ನಮ್ಮನ್ನು ಸುಡುವುದಕ್ಕೆ ಬರುತ್ತಲಿದೆ. ನೀನು ಸಮರ್ಥನಿರುವಿ. ನಿನ್ನ ಹೊರತು ನಮ್ಮನ್ನು ರಕ್ಷಿಸುವವರು ಯಾರೂ ಇಲ್ಲ" ಎಂದು ಕೂಗಿಕೊಂಡರು. ಆಗ ಭಗವಾನನು "ಅಂಜಬೇಡಿರಿ. ಎಲ್ಲರೂ ಕಣ್ಣು ಮುಚ್ಚಿರಿ!" ಎಂದು ಹೇಳಿದನು. ಮತ್ತೂ ಅನಂತ ಶಕ್ತಿಯುಳ್ಳ ಶ್ರೀ ಹರಿಯು ಕ್ಷಣದಲ್ಲಿ ಸರ್ವ ಅಗ್ನಿಯನ್ನು ತನ್ನ ಮುಖದಲ್ಲಿ ಶೋಷಣ ಮಾಡಿದನು. ಸರ್ವರೂ ಕಣ್ಣು ತೆರೆದಾಗ, ಕಾಡು ಬೇಗೆಯು ಇರಲೇ ಇಲ್ಲ! ಎಲ್ಲರೂ ಬೆಳಗ್ಗೆ ಗೋಕುಲಕ್ಕೆ ಹೋಗಿ ಬಹಳ ದೊಡ್ಡ ಆನಂದೋತ್ಸವವನ್ನು ಆಚರಿಸಿದರು.

## ಪ್ರಲಂಬಾಸುರ

ಒಮ್ಮೆ ಗೋಪಾಲರೆಲ್ಲರೂ ಆಟವಾಡುತ್ತಿದ್ದಾಗ ಪ್ರಲಂಬಾಸುರನೆಂಬ ದೈತ್ಯನು ಕೃಷ್ಣ ಹಾಗೂ ಗೋಪಾಲರನ್ನು ನಾಶ ಮಾಡುವುದಕ್ಕಾಗಿ ಬಾಲಗೋಪಾಲ ವೇಷದಿಂದ ಬಂದು 'ನಾನು ನಿಮ್ಮ ಸಂಗಡ ಆಟ ಆಡುವೆವು ನನ್ನನ್ನು ಆಟಕ್ಕೆ ಕರೆದುಕೊಳ್ಳಿರಿ' ಎಂದನು. ಬಾಲಗೋಪಾಲರಿಗೆ ಈ ಹೊಸ ಗೋಪಾಲನು ನೆರೆಯೂರಿನವನಿರಬೇಕೆಂದು ತಿಳಿದುಕೊಂಡು ಆಟಕ್ಕೆ ಕರೆದುಕೊಂಡರು. ಆದರೆ ಸರ್ವಜ್ಞನಾದ ಶ್ರೀಕೃಷ್ಣನು ಮೊದಲೇ ಅವನನ್ನು ಗುರುತಿಸಿದನು. ಹಾಗೂ ಅವನ ವಧೆ ಮಾಡುವುದಕ್ಕಾಗಿ ಅವನ ಮಿತ್ರತ್ವಕ್ಕೆ ಅನುಮೋದನೆ ನೀಡಿದನು. ಹಾಗೂ ಬಲರಾಮನಿಗೆ ಅವನನ್ನು ಕಾಣಿಸಿ ಕಣ್ಣು ಸಂಜ್ಞೆ ಮಾಡಿದನು. ಕೃಷ್ಣನು ಎಲ್ಲ ಗೋಪಾಲರನ್ನು ಕೂಡಿಸಿ ಎರಡು ಗುಂಪನ್ನು ಮಾಡಿದನು. ಒಂದು ಗುಂಪಿಗೆ ತಾನು ಹಿರೇಮಣಿ, ಮತ್ತೊಂದು ಗುಂಪಿಗೆ ಬಲರಾಮ ಹಿರೇಮಣಿ ಹೀಗೆ ಕುಸ್ತಿ ಆಟ ಆರಂಭವಾಯಿತು. ಬಲರಾಮನ ಗುಂಪು ಗೆದ್ದಿತು. ನಿಯಮದ ಪ್ರಕಾರ ಪ್ರಲಂಬನ ಹೆಗಲ ಮೇಲೆ ಬಲರಾಮನು ಕುಳಿತನು. ಬಲರಾಮನನ್ನು ಎತ್ತಿಕೊಂಡು ಹೋಗುವಾಗ ಪ್ರಲಂಬನಿಗೆ ಭಾರವು ಸಹನವಾಗಲಿಲ್ಲ. ತನ್ನ ಮಹಾ ಭಯಂಕರ ರೂಪವನ್ನು ಪ್ರಕಟಮಾಡಿದನು. ಪರ್ವತದಂತೆ ಶರೀರ, ನೇಗಿಲ ಹಲ್ಲಿನಂತೆ ದವಡೆಗಳು ಹಾಗೂ ಅಗ್ನಿಯಂತಹ ಕೇಶಗಳನ್ನು ಕಂಡು ಬಲರಾಮನು ಕ್ಷಣಕಾಲ ಹೆದರಿದನು. ಆದರೆ ಕ್ಷಣಾರ್ಧದಲ್ಲಿ ಸಾವರಿಸಿಕೊಂಡು ಪ್ರಲಂಬಾಸುರನ ತಲೆಗೆ ಒಂದು ಮುಷ್ಠಿ ಪ್ರಹಾರ ಮಾಡಿದನು. ಕೂಡಲೇ ಅಸುರನು ರಕ್ತ ಕಾರುತ್ತ ಭೂಮಿಗೆ ಬಿದ್ದು ಗತಪ್ರಾಣನಾದನು. ಹೀಗೆ ಆಕಸ್ಮತ್ತಾಗಿ ಬಲರಾಮನು ಭಯಂಕರ ಅಸುರನನ್ನು ಕೊಂದಿದ್ದನ್ನು ನೋಡಿ ಗೋಪಾಲರೆಲ್ಲರಿಗೂ ಆಶ್ಚರ್ಯವಾಯಿತು. ಎಲ್ಲರೂ ಬಲರಾಮನ ಪ್ರಶಂಸೆ ಮಾಡಿದರು.

## ಕಾಡ್ಗಿಚ್ಚು ನುಂಗಿದುದು

ಇದೇ ವೇಳೆಗೆ ಆಕಳುಗಳು ಮೇಯುತ್ತ ಬಹಳ ದೂರ ಹೋಗಿ ಬಿಟ್ಟಿದ್ದವು. ಗೋವುಗಳನ್ನು ಕಾಣದೆ ಗೋಪಾಲರು ಹೆದರಿ ಶೋಧಿಸಹತ್ತಿದರು. ಬಹಳ ಹೊತ್ತಿನ ಮೇಲೆ ಆಕಳ ಒದರುವಿಕೆಯ ಧ್ವನಿ ಕೇಳಿಸಿತು. ಶ್ರೀಕೃಷ್ಣನು ಪ್ರತಿಯೊಂದು ಆಕಳ ಹೆಸರನ್ನು ತೆಗೆದುಕೊಂಡು ಗಂಗೆ, ಯಮುನಾ, ಗೋದಾವರಿ ಆದಿ ಕರೆದ ಕೂಡಲೇ ಅವು ಓಡುತ್ತ ಬಂದು ಅವನ ಸುತ್ತಲೂ ನಿಂತು, ಅವನನ್ನು ಪ್ರೇಮದಿಂದ ನೆಕ್ಕ ಹತ್ತಿದವು.

ಅಷ್ಟರಲ್ಲಿ ಧೂಮಕೇತುವಿನಂತೆ ನಾಲ್ಕೂ ದಿಕ್ಕಿನಿಂದ ಕಾಡ್ಗಿಚ್ಚು ಹಬ್ಬಿ ಗಾಳಿಯಿಂದ ಸರ್ವ ವನವನ್ನೂ ವ್ಯಾಪಿಸಿತು. ಆಗ, ಗೋಪಾಲರೂ, ಗೋವುಗಳೂ ಕೆಟ್ಟ ದನಿಯಿಂದ ಒದರ ಹತ್ತಿದರು. "ಕೃಷ್ಣಾ, ಬಲರಾಮಾ, ನಮ್ಮನ್ನು ರಕ್ಷಿಸು. ನಿಮ್ಮ ಹೊರತು ನಮಗೆ ಯಾರದೂ ಆಧಾರವಿಲ್ಲ"ವೆಂದು ಮೊರೆ ಹೊಕ್ಕಿದರು. ಆಗ ಶ್ರೀಕೃಷ್ಣನು, 'ಮಿತ್ರರೇ, ಹೆದರಬೇಡಿ. ಸರ್ವರೂ ಕಣ್ಣು ಮುಚ್ಚಿರಿ' ಎಂದು ಹೇಳಲು ಎಲ್ಲರೂ ಕಣ್ಣು ಮುಚ್ಚಿದರು. ಆಗ ಯೋಗಾಧೀಶ ಭಗವಂತನು ಸರ್ವ ಅಗ್ನಿಯನ್ನೂ ತನ್ನ ಮುಖದಲ್ಲಿ ಎಳೆದುಕೊಂಡನು. ಶ್ರೀಕೃಷ್ಣನು ಹೇಳಿದ ಮೇಲೆ ಸರ್ವ ಗೋಪಾಲರು ಕಣ್ಣು ತೆರೆದು ನೋಡುತ್ತಾರೆ. ಎಲ್ಲಿಯೂ ಅಗ್ನಿಯ ಸುಳಿವೇ ಇಲ್ಲ!

ಇವೆಲ್ಲವನ್ನು ಕಂಡು, ಸರ್ವ ಗೋಪಾಲರು ತಮ್ಮ ಮನೆಗೆ ಹೋಗಿ ಎಲ್ಲ ಗೋಪ ಗೋಪಿಯರಿಗೂ "ಬಲರಾಮನು ಪ್ರಲಂಬಾಸುರನನ್ನು ಕೊಂದನು ಹಾಗೂ ಶ್ರೀಕೃಷ್ಣನು ತಮ್ಮನ್ನೂ ಕಾಳ್ಗಿಚ್ಚಿನಿಂದ ಸಂರಕ್ಷಿಸಿದನು" ಎಂದು ಹೇಳಲಾಗಿ ಎಲ್ಲರೂ ಸರ್ವರೂ ಕೃಷ್ಣ-ಬಲರಾಮರು ಯಾರಾದರೂ ಸಮರ್ಥ ದೇವತೆಗಳು ಗೋಕುಲದಲ್ಲಿ ಅವತರಿಸಿರಬೇಕೆಂದು ನಿಶ್ಚಯ ಮಾಡಿಕೊಂಡರು. **(ಸಶೇಷ)**

---

# ಉಯಿಲು

**ಹುಟ್ಟ ಬಾ...ಬರಲಿದ್ದರೆ ನಿನಗೆ..ಇನ್ನೊಮ್ಮೆ ಹುಟ್ಟ ಬಾ...**
**ಕಡಲ ಮುತ್ತಾಗಿ ಬೇಡ, ಒಡಲ ಮುತ್ತಾಗಿ ಬೇಡ...**
**ಸಮಯ ವಿಷಮ ವಿರುವಾಗ ಈಗ ಬೇಡ...ಇನ್ನೊಮ್ಮೆ ಹುಟ್ಟ ಬಾ...**

**ಮೊಗ್ಗು ಹೂವಾಗಿ ಬೇಡ...ಏರು ತಗ್ಗಾಗಿಯೂ ಬೇಡ**
**ಹುಟ್ಟಲಿದ್ದರೆ ನಿನಗೆ... ಅನುರಣನ ಭಾವವಾಗಿ ಬಾ...**
**ಈಗ ಬೇಡ ಇನ್ನೊಮ್ಮೆ ಹುಟ್ಟ ಬಾ...**

**ಮರಳು ಅಲೆಯಾಗಿ ಬೇಡ...ಕರುಳ ಬೆಲೆಯಾಗಿಯೂ ಬೇಡ...**
**ಇಲ್ಲಿ ಅಲ್ಲಲ್ಲಿ ಬೇಲಿ ಹಾಕಿರುವಾಗ ಈಗ ಬೇಡ ಇನ್ನೊಮ್ಮೆ ಹುಟ್ಟ ಬಾ**

**ಮಿಂಚಾಗಿ ಬೇಡ...ಸರಿವ ಮುಗಿಲಾಗಿಯೂ ಬೇಡ...**
**ಹುಟ್ಟಲಿದ್ದರೆ ನಿನಗೆ ತಂಪು ನೆರಳಾಗಿ ಬಾ...ಈಗ ಬೇಡ ಇನ್ನೊಮ್ಮೆ ಹುಟ್ಟ ಬಾ...**

**ಪ್ರಣಯ ಪ್ರಭೆಯಾಗಿ ಬೇಡ... ಉರಿವ ಧಗೆಯಾಗಿ ಬೇಡ...**
**ಹಣತೆಗಳು ಅಲ್ಲಲ್ಲಿ ಅಳುತ್ತಿರುವಾಗ. ಈಗ ಬೇಡ ಇನ್ನೊಬ್ಬ ಹುಟ್ಟ ಬಾ**

**ಬೇನೆ ಬಸಿರಾಗಿ ಬೇಡ...ಉಸಿರ ಬಿಸಿಯಾಗಿ ಬೇಡ...**
**ಹುಟ್ಟಲಿದ್ದರೆ ಭಾವ ಸಿಂಚನಕೆ ನಗುವಾಗಿ ಬಾ...**
**ಈಗ ಬೇಡ...ಇನ್ನೊಮ್ಮೆ ಹುಟ್ಟ ಬಾ...**

**ನೆಲದ ನೆಪವಾಗಿ ಬೇಡ ಸ್ಪರ್ಶ ಸ್ವರವಾಗಿ ಬೇಡ**
**ಹಸಿ ಮನದ ಮಸಿಯಕತೆಯಾಗಿ ಬಾ..ಭಾವ ಬಿಲದ ಒರತೆಯಾಗಿ ಬಾ**
**ಈಗ ಬೇಡ...ಇನ್ನೊಮ್ಮೆ ಹುಟ್ಟ ಬಾ...**

**ಗಂಗಾಧರ ಪಣಿಯೂರು**

*PAGE DONATED BY :* ***WELL WISHER OF HWT***

# ಭಾಸ ಸುಭಾಷಿತ

– ಪ್ರೊ। ವಿಷ್ಣು ಜೋಶಿ, ಕುಮಟಾ

## ಪ್ರಯತ್ನ

**ಕಾಷ್ಠಾದಗ್ನಿರ್ಜಾಯತೇ ಮಥ್ಯ ಮಾನಾತ್ ।**
**ಭೂಮಿಸ್ತೋಯಂ ಖನ್ಯ ಮಾನಾ ದಧಾತಿ॥**
**ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಂ।**
**ಮಾರ್ಗಾರಬ್ಧಾಃ ಸರ್ವಯತ್ನಾಃ ಫಲನ್ತಿ ॥**

***(ಪ್ರತಿಜ್ಞಾ ಯೌಗಂಧರಾಯಣಮ್)***

ಪರಸ್ಪರ ಘರ್ಷಿಸುವುದರಿಂದ ಕಟ್ಟಿಗೆಯಿಂದ ಬೆಂಕಿ ಉತ್ಪನ್ನವಾಗುತ್ತದೆ. ಆಳವಾಗಿ ಅಗೆದರೆ ನೆಲದಲ್ಲಿ ನೀರು ಸಿಗುತ್ತದೆ. ಉತ್ಸಾಹದಿಂದ ಕೂಡಿದವರಿಗೆ ಅಸಾಧ್ಯವೆನ್ನುವುದು ಯಾವುದೂ ಇಲ್ಲ. ಸರಿಯಾದ ರೀತಿಯಲ್ಲೂ ಆರಂಭಿಸಿದ ಕೆಲಸಗಳೆಲ್ಲ ಫಲ ಕೊಡುತ್ತವೆ. 'ವೆಲ್ ಬಿಗಿನ್ ಈಸ್ ಹಾಫ್ ಡನ್' ಅಂದರೆ ಚೆನ್ನಾಗಿ ಯೋಚಿಸಿ ಆರಂಭಿಸಿದ ಕೆಲಸ ಅರ್ಧ ಮುಗಿದಂತೇ ಎನ್ನುವ ಆಂಗ್ಲೋಕ್ತಿ ಇದೆ. ಇದನ್ನೇ ಭಾಸಕವಿ ವಿಶಿಷ್ಟ ರೀತಿಯಲ್ಲಿ ಆರಂಭಿಸಿದ ಕೆಲಸಗಳೆಲ್ಲಾ ಫಲ ಕೊಡುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಯಜ್ಞಾಗ್ನಿಯನ್ನು ಲೌಕಿಕಾಗ್ನಿಯಂತೆ ಉತ್ಪಾದಿಸುವಂತೆ ಇಲ್ಲ. ಶಮೀವೃಕ್ಷದ ಕಟ್ಟಿಗೆಯ ತುಂಡಿಗೆ "ಅರಣಿ" ಎಂದು ಹೆಸರು. ಈ ಅರಣಿಗಳನ್ನು ಸರಿಯಾಗಿ ಪರಸ್ಪರ ತಿಕ್ಕಿದಾಗ ಬೆಂಕಿ ಉತ್ಪನ್ನವಾಗುತ್ತದೆ. ಇನ್ನು ಆಳವಾಗಿ ಅಗೆದಾಗ ಭೂಮಿ ನೀರನ್ನು ಕೊಡುತ್ತದೆ. ಆದರೆ ಇಲ್ಲಿ ಅರಣಿ ಘರ್ಷಣೆ ಹಾಗೂ ಭೂಮಿಯನ್ನು ಅಗೆಯುವುದು ಸಾಂಕೇತಿಕ "ನಿರಂತರ ಉತ್ಸಾಹ" ದೇಶ, ಕಾಲ, ಪರಿಜ್ಞಾನ ಇರುವ ವ್ಯಕ್ತಿಗೆ ಅಸಾಧ್ಯ ಎನ್ನುವುದು ಯಾವುದೂ ಇಲ್ಲ. ಭಾಸ ಕವಿ ನಿರಂತರ ಉತ್ಸಾಹವನ್ನು ಪ್ರಯತ್ನಶೀಲತೆಯನ್ನು ಸದಾ ಗೌರವಿಸಿದ್ದಾನೆ.

"ಇಂಪೋಸಿಬಲ್ ಈಸ್ ಎ ವರ್ಡ್, ವಿಚ್ ಕೇನ್ ಬಿ ಫೌಂಡ್ ಇನ್ ಫೂಲಿಷ್ ಡಿಕ್ಷನರಿ" ಇಂದು ನೆಪೊಲಿಯನ್ ಭೋನಾಪಾರ್ಟನ ನುಡಿ.

ಅನೇಕರು ಕೆಲಸವನ್ನೇನ್ನೋ ಆರಂಭಿಸುತ್ತಾರೆ. ಆದರೆ ಕೆಲಸದ ಬಗ್ಗೆ ಜ್ಞಾನ ಇರುವುದೇ ಇಲ್ಲ.

**ಆರಭ್ಯತೇ ನ ಖಲು ವಿಘ್ನಭಯೇನ ನೀಚೈಃ।**
**ಆರಬ್ಧ ವಿಘ್ನ ನಿಹಿತಾ ವಿರಮಂತಿ ಮಧ್ಯೆ।**
**ವಿಘ್ನಃ ಪುನಃ ಪುನಃ ಪ್ರತಿಹನ್ಯ ಮಾನಾ।**
**ಆರಬ್ಧ ಉತ್ತಮ ಜನಾಃ ನ ಪರಿತ್ಯಜಂತಿ॥**

ಕೆಲವರು ಮುಂದೆ ತೊಂದರೆಗಳು ಬರಬಹುದೆಂದು ಬರಲಿರುವ ವಿಘ್ನಗಳಿಗೆ ಹೆದರಿ ಕೆಲಸವನ್ನೇ ಆರಂಭಿಸುವುದಿಲ್ಲ. ಇವರು ನೀಚರು. ಇನ್ನು ಕೆಲವರು ಕೆಲಸವನ್ನೇನೋ ಆರಂಭಿಸುತ್ತಾರೆ. ಆದರೆ ಕೆಲಸಮಧ್ಯೆ ಸಣ್ಣಪುಟ್ಟ ಅಡ್ಡಿ ಆತಂಕಗಳು ಎದುರಾದರೂ ಕೆಲಸವನ್ನೂ ಅಲ್ಲೇ ನಿಲ್ಲಿಸಿ ಕೈ ತೊಳೆದುಕೊಳ್ಳುತ್ತಾರೆ. ಇಂತಹವರಿ ಮಧ್ಯಮರು ಇನ್ನೂ ಕೆಲವರು ಕೈಗೊಂಡ ಕೆಲಸವನ್ನು ಮುಂದುವರೆಸುವಾಗ ವಿಘ್ನ ಪರಂಪರೆಗಳ ಆಹತಿಯೇ ಎದುರಾಗದೂ ಆರಂಭಿಸಿದ ಕೆಲಸವನ್ನು ದಡಹಾಯಿಸದೇ ಬಿಡುವುದೇ ಇಲ್ಲ. ಇಂತವರು ಉತ್ತಮರು ಎಂದು ಅಭಿಪ್ರಾಯ ಪಡಲಾಗಿದೆ.

ಒಂದು ಕೆಲಸದ ಸಫಲತೆಗೆ ದೇಶ ಕಾಲಗಳ ಪರಿಜ್ಞಾನ ಬೇಕು. ಸರಿಯಾದ 'ಪ್ಲಾನಿಂಗ್' ಬೇಕು. ವಿಘ್ನಗಳು ಎದುರಾದಾಗ ಅವುಗಳನ್ನು ಎದುರಿಸಲು, ಸಿದ್ಧತೆ ಇರಬೇಕು. ಇದನ್ನು ಭಾಸಕವಿ 'ಮಾರ್ಗ' ಅಂದರೆ ಸರಿಯಾದ ದಾರಿ ಎಂದು ಕರೆದಿದ್ದಾನೆ. ಇಂದು ನಮ್ಮ ಅನೇಕ ಕೆಲಸಗಳು ಕೆಡುವುದಕ್ಕೆ ಮಾಡುವ ಕೆಲಸದ ಬಗ್ಗೆ ಸರಿಯಾದ, ಜ್ಞಾನ, ಮಾಹಿತಿ, ನಿರಂತರ ಉತ್ಸಾಹ ಹಾಗೂ ಯೋಜನೆಗಳು ಇಲ್ಲದಿರುವುದೇ ಕಾರಣ. "ಅದೇ ಭಟ್ಟ ಸ್ವಾದಿಗೆ ಹೋದಂತೆ" ಎನ್ನುವ ನಾಣ್ಣುಡಿ.



**"ನಾಽಸ್ತ್ಯುದ್ಯಮ ಸಮೋಽಬಂಧುಃ"**

*(ಸುಭಾಷಿತ ತ್ರಿಶತಿ 186)*

ಉದ್ಯಮ ಅಂದರೆ ಪ್ರಯತ್ನಕ್ಕೆ ಸಮನಾದ ಬಂಧುವಿಲ್ಲವಂತೆ.

**"ಯತ್ನವಾನ್ ನಾಽವ ಸೀದತಿ"**

*(ಮಹಾಭಾರತ-2. 331.2)*

ಪ್ರಯತ್ನದಿಂದ ಕೂಡಿದ ವ್ಯಕ್ತಿಗೆ ಸೋಲಿನ ಸೋಲಿಲ್ಲ.

**"ಯತ್ನೈಃ ಶುಭೈಃ ಪುರುಷತಾ ಭವತೀಹ ನೃಸಾಮ್"**

*(ಅವಿಮಾರಕಮ್- 3. 12)*

ಪುರುಷರ ಭಾಗ್ಯವು ಶುಭ ಪ್ರಯತ್ನಗಳಿಂದಲೇ ಬರುತ್ತದೆ. ಮೊದಲಾದ ವಾಕ್ಯಗಳು ಪ್ರಯತ್ನದ ಮಹತ್ವವನ್ನು ಬಿತ್ತರಿಸಿದೆ. ಆದರೆ

**"ಯತ್ನೈಃ ಕೃತೇ ಯದಿ ನ ಸಿದ್ಧ್ಯತಿ ಕೋಽತ್ರ ದೋಷಃ"**

*(ಪಂಚತಂತ್ರ- 2. 137)*

ಮಾಡುವ ಪ್ರಯತ್ನವನ್ನು ಮಾಡಿದರೂ ಕೆಲವೊಮ್ಮೆ ಕೆಲಸ ಆಗದೇ ಇದ್ದರೆ ಅದರಲ್ಲಿ ಮನುಷ್ಯರದು ಯಾವ ದೋಷವೂ ಇಲ್ಲ. ವಿಧಿ ವಿರುದ್ಧವಾದರೆ ಪುರುಷ ಪ್ರಯತ್ನಗಳು ವ್ಯರ್ಥವಾಗುತ್ತವೆ ಎಂದು ಅಭಿಪ್ರಾಯಪಡಲಾಗಿದೆ. ●






*PAGE DONATED BY : **SHRI N. R. HEGDE, DOMBIVLI** (DEC.-2011)*

# ಸಂಕ್ಷಿಪ್ತ ಸುದ್ದಿಗಳು

## VYASA PUJA & CHATURMASA



We are happy to announce that His Holiness Shrimadjagadguru Shankaracharya Shree Shree Raghaveshwara Bharathi Mahaswamiji will be observing His 18th Chaturmasya Vratha Sankalpa on the Ashadha Shukla Poornima of Kara Samvatsara. This year's Chaturmasya will be observed at Ashoke. Gokarna from 15.07.2011 to 12.09.2011. During this period many Dharmic, Cultural and Social programmes will be held.

We invite all devotees of Srimath to visit Ashoke during this auspicious Chaturmasa and receive Prasadam and blessings from His Holiness Shree Swamiji.

## ಶ್ರೀ ಪ್ರಕಾಶ ಭಂಡಾರಿಯವರಿಗೆ ಸನ್ಮಾನ



ಮುಂಬಯಿಯ ವರಿಷ್ಟ ಪೋಲೀಸ್ ಅಧಿಕಾರಿ (ಮಹಾರಾಷ್ಟ್ರ ಸ್ಟೇಟ್ ಇಂಟಲಿಜೆನ್ಸ್ ಆಫ್ ಪೋಲೀಸ್) ಹಾಗೂ ಅವರೊಂದಿಗೆ 25 ವರ್ಷಗಳ ಹಿಂದೆ ತರಬೇತಿ ಪಡೆದಿದ್ದ 381 ಮಂದಿ ಸಬ್ ಇನ್ಸ್‌ಫೆಕ್ಟರ್ ಮಿತ್ರರ ಪುನರ್ಮಿಲನ ಸಂಭ್ರಮವು ಶ್ರೀ ಭಂಡಾರಿಯವರ ನೇತೃತ್ವದಲ್ಲಿ ಮಹಾರಾಷ್ಟ್ರದಲ್ಲಿರುವ ಪೋಲೀಸ್ ಅಕಾಡಮಿಯಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ರಾಜ್ಯ ಗೃಹಮಂತ್ರಿ ಆರ್. ಆರ್. ಪಾಟೀಲರವರು ಶ್ರೀ ಪ್ರಕಾಶ ಭಂಡಾರಿಯವರು 25 ವರ್ಷಗಳ ಕಾಲ ಪೋಲೀಸ್ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯನ್ನು, ಅವರ ಪ್ರಾಮಾಣಿಕತೆ, ಸಾಹಸ ಹಾಗೂ ದಕ್ಷತೆಯನ್ನು ಪರಿಗಣಿಸಿ ಅವರನ್ನು ಗೌರವಿಸಿದರು. ಕಲಾಜಗತ್ತು ಚಿಣ್ಣರ ಬಿಂಬದ ರೂವಾರಿಯಾದ ಭಂಡಾರಿಯವರು ಸುಮಾರು 4 ಸಾವಿರಕ್ಕೂ ಹೆಚ್ಚಿನ ಮಕ್ಕಳಿಗೆ ಕನ್ನಡವನ್ನು ಕಲಿಸುವ ಹಾಗೂ ನಮ್ಮ ಸಂಸ್ಕೃತಿ, ಸಂಸ್ಕಾರದ ಪರಿಚಯವನ್ನು ಮಾಡಿಕೊಡುವದರ ಮೂಲಕ ಯುವ ಜನಾಂಗಕ್ಕೆ ಮಾರ್ಗದರ್ಶಕರಾಗಿದ್ದಾರೆ.

## ಕ್ಯಾಲಿಫೋರ್ನಿಯಾದಲ್ಲಿ ಕನ್ನಡ ಭುವನೇಶ್ವರಿ



ಅಮೇರಿಕಾದ ಕನ್ನಡಿಗರ ಪ್ರತಿಷ್ಠಿತ ಕನ್ನಡ ಸಾಹಿತ್ಯರಂಗವು ಇತ್ತೀಚೆಗೆ ಕ್ಯಾಲಿಫೋರ್ನಿಯಾದ ಸ್ಯಾನ್ ಹೊಸೆ ನಗರದಲ್ಲಿ ಕನ್ನಡ ವಸಂತ ಸಾಹಿತ್ಯೋತ್ಸವವನ್ನು ಆಯೋಜಿಸಿತ್ತು. ಇದರಲ್ಲಿ ಕನ್ನಡ ಖ್ಯಾತ ಹಾಸ್ಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರನ್ನು ವಿಶೇಷ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಕನ್ನಡ ಹಾಸ್ಯ ಸಾಹಿತ್ಯ ಲೇಖಕಿಯಾಗಿ 'ನನ್ನ ಅನುಭವಗಳು' ಎಂಬ ಉಪನ್ಯಾಸವನ್ನು ಶ್ರೀಮತಿ ಹೆಗಡೆಯವರು ನೀಡಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಮೇರಿಕಾದ ವಿವಿಧ ಭಾಗಗಳಿಂದ ಆಗಮಿಸಿದ ಕನ್ನಡಿಗರು ಕಾರ್ಯಕ್ರಮವನ್ನು ಆಸ್ವಾದಿಸಿದರು. ನಂತರ ಲಾಸ್ ಎಂಜಲಿಸ್ ನಗರದ ವಿವಿಧ ಭಾಗಗಳಲ್ಲಿ ಭುವನೇಶ್ವರಿಯವರ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಅಮೇರಿಕಾದಲ್ಲಿ ನೆಲೆಸಿರುವ ಹವ್ಯಕರು ಭುವನೇಶ್ವರಿಯವರೊಂದಿಗೆ ವಿಶೇಷ ಅಭಿಮಾನದಿಂದ ''ಏಕವಚನ ಸಂಘ'' ಎಂಬ ಹೆಸರಿನಲ್ಲಿ ಫೋಟೋ ತೆಗೆಸಿಕೊಂಡರು.



## ACHIEVEMENT

**Master Vivek Nagaraj Pandit**, scored 96.8% in ICSE Board Exam conducted in March 2011. He has also stood First to Bombay Scottish School-Powai. We congratulate him.

***

## ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ



**ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು ಸೋಂದಾ, ಸ್ವರ್ಣವಲ್ಲೀ ಮಠ ಇವರ ವ್ಯಾಸಪೂಜಾ ಮತ್ತು ಚಾತುರ್ಮಾಸ ವ್ರತವನ್ನು ಜುಲೈ 15, 2011 ರಂದು ಸ್ವರ್ಣವಲ್ಲಿ ಮಠದಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮದಲ್ಲಿ ಸರ್ವ ಶಿಷ್ಯ ವೃಂದವೂ ಪಾಲ್ಗೊಂಡು ಶ್ರೀಗಳ ಆಶೀರ್ವಾದಕ್ಕೆ ಪಾತ್ರರಾಗಬೇಕಾಗಿ ವಿನಂತಿ.**

**ಶ್ರೀಗಳ ಚಾತುರ್ಮಾಸಾವಧಿಯಲ್ಲಿ ಮುಂಬಯಿ ಸೀಮಾ ವತಿಯಿಂದ ಆಗಸ್ಟ್ 28, 2011ರಂದು ನಡೆಯಲಿರುವ ಭಿಕ್ಷಾ ಸೇವೆಯಲ್ಲಿ ಪಾಲ್ಗೊಂಡು ಶ್ರೀಗಳ ಕೃಪೆಗೆ ಪಾತ್ರರಾಗೋಣ.**

**ಶ್ರೀ ಆರ್. ಜಿ. ಭಟ್**
**ಕಾರ್ಯದರ್ಶಿ**
**ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ**

## ಕನಸು

ಮಬ್ಬುಗತ್ತಲು ಹರಿದಾಗ,
ಹಕ್ಕಿಗಳು ಚಿಲಿಪಿಲಿ ಉಲಿದಾಗ
ಪುಷ್ಪಗಳು ಕಿಲಕಿಲನೆ ನಕ್ಕಾಗ
ಭುವಿಯ, ಸುಮಧುರ ಸವಿಯ
ರವಿಯುಣಲು ಬಂದಾಗ
ನಸುಕು ಸರಿದಿತ್ತು;
ಆಗ ಬೆಳಕು ಬಂದಿತ್ತು
ಮತ್ತೆ ಮುಗ್ಧತೆಯ ಉಸಿರಿತ್ತು,
ಉಸಿರಲ್ಲೇ ಕನಸಿತ್ತು

ಲೋಕಪ್ರಿಯ, ಮುಂಬಯಿ

*PAGE DONATED BY : **HEGDE HOSPITAL**, CHEMBUR, COURTESY : **DR. DINESH HEGDE** (DEC.-2009)*

'Havyaka Sandesha', July 2011

RNI NO. MAHBIL / 2000 / 746,
Post al R.NO. L / TECH - 47 / 989 / MBI / 2009 - 11

| WPP Licence No. MR/Tech WPP - 188 / North / 09-11 Posted at Mumbai Patrika Channel Stg. Office Mumbai-400 001. | Date of Posting : 27, 28th of every previous month |
|---|---|

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

# ದೇವರಿಗೆ ಎಳ್ಳೆಣ್ಣೆ ದೀಪ ಒಳ್ಳೆಯದು

## ಅಜಾರು ನಾಗರಾಜ ರಾಯ, ಕಟೀಲು ಇವರ ಅಭಿಪ್ರಾಯದಂತೆ

ದೇವರಿಗೆ ಎಳ್ಳೆಣ್ಣೆ ದೀಪ ಪ್ರಿಯವೇ? (ಜನತಾವಾಣಿ- ನ.23) ಈ ಬಗ್ಗೆ 'ಪಟ್ಟಾಂಗ'ದಲ್ಲಿ ವ್ಯಕ್ತವಾದ ಅಭಿಪ್ರಾಯ ಸರಿಯೇ ಇದೆ. ದೇವರಿಗೆ ತುಪ್ಪದಿಂದಾಗಲೀ ಎಳ್ಳೆಣ್ಣೆಯಿಂದಾಗಲೀ ದೀಪ ಹಚ್ಚಬೇಕು.

**ಘೃತೇನ ದೀಪಂ ಪ್ರಜ್ವಾಲ್ಯ ತಿಲತೈಲೇನ ವಾ ಪುನಃ ।**
**ಶತಾಯುಷಾ ಸಮಾಯಕ್ತಶ್ಚಕ್ಷುಷಾ ಚ ನ ಹೀಯತೇ ॥**

*(ಪೂಜಾ ಪ್ರಕಾಶ, ಪು. 261, ಬ್ರಹ್ಮಪುರಾಣೇ)*

ತುಪ್ಪದ ದೀಪ ವಿಶೇಷ. ಅನಂತರದ ಸ್ಥಾನ ಹಾಗೂ ಎಣ್ಣೆಗಳಲ್ಲಿ ಎಳ್ಳೆಣ್ಣೆ ಶ್ರೇಷ್ಠ.

**ತಿಲತೈಲಾನ್ವಿತಂ ದೀಪಂ ವಿಷ್ಣೋರ್ವಾ ಶಂಕರಸ್ಯ ಚ।**
**ದತ್ವಾನರಃ ಸರ್ವಕಾಮಾನ್ ಪ್ರಾಪ್ನೋತಿ ನರೋತ್ತಮ॥**

*(ಪೂಜಾ ಪ್ರಕಾಶ, ಪು. 75, ಸ್ಕಾಂದೇ)*

ಆದ್ದರಿಂದ ಇಲ್ಲಿ ಎಳ್ಳೆಣ್ಣೆಯನ್ನಷ್ಟೇ ಹೆಸರಿಸಿದೆ. ತುಪ್ಪದ ದೀಪವನ್ನೂ ಎಣ್ಣೆಯ ದೀಪವನ್ನೂ ಎರಡನ್ನೂ ಹಚ್ಚಿಡುವುದಾದರೆ ತುಪ್ಪದ ದೀಪವನ್ನು ದೇವರ ಬಲ ಭಾಗದಲ್ಲೂ ಎಳ್ಳೆಣ್ಣೆ ದೀಪವನ್ನು ದೇವರ ಎಡಭಾಗದಲ್ಲೂ ಇಡಬೇಕು.

**ಘೃತದೀಪೋ ದಕ್ಷಿಣತಸ್ತೈಲದೀಪಸ್ತು ವಾಮತಃ ॥**

*(ಆಚಾರೇಂದು, ಪು 208, ಮಹೋದಧೌ)*

ಎರಡೂ ತುಪ್ಪ ಮತ್ತು ಎಣ್ಣೆ- ಶ್ರೇಷ್ಠ ಎಂದು ಭಾವಿಸಿ, ಎರಡನ್ನೂ - ಬೆರೆಸಿ ದೀಪ ಹಚ್ಚಬಾರದು-

**ನ ಮಿಶ್ರೀಕೃತ್ಯ ದದ್ಯಾತ್ತು ದೀಪಂ ಸ್ನೇಹಾನ್ ಘೃತಾದಿಕಾನ್।**

*(ಶಬ್ದಕಲ್ಪದ್ರುಮ, 'ದೀಪ' ಪು 718)*

ದೀಪಕ್ಕೆ ಎಳ್ಳೆಣ್ಣೆಯನ್ನಲ್ಲದೆ ಬೇರೆ ಎಣ್ಣೆಯನ್ನು ಉಪಯೋಗಿಸಬಾರದು.

**ಘೃತಂ ತೈಲಂಚ ದೀಪಾರ್ಥೇ ಸ್ನೇಹಾನ್ಯನ್ಯಾನಿ ವರ್ಜಯೇತ್ । (ಅಲ್ಲೇ)**

ಎಂದು ಹೇಳಿದೆಯಾದರೂ ಇದು ತುಪ್ಪ / ಎಳ್ಳೆಣ್ಣೆಗಳ ಪ್ರಾಶಸ್ತ್ಯವನ್ನು ಸೂಚಿಸುವುದಕ್ಕಾಗಿ ಹೇಳಿದೆ. ಯಾಕೆಂದರೆ ಅನ್ಯತ್ರ, ತುಪ್ಪ ಮತ್ತು ಎಳ್ಳೆಣ್ಣೆಗಳನ್ನು ವಿಧಿಸುವುದರ ಜೊತೆಗೆ ಪ್ರಾಣಿಜನ್ಯ ಎಣ್ಣೆಗಳನ್ನಷ್ಟೇ ನಿಷೇಧಿಸಿದೆ.

**ಘೃತೇನ ದೀಪಾ ದಾತವ್ಯಾಸ್ತಿಲತೈಲೇನು ಯಾದವ ।**
**ವಸಾಮಜ್ಜಾದಿಭಿರ್ದೀಪಾ ನ ತು ದೇಯಾ ಕದಾಚನ ॥**

*(ವಿಧಾನ ಪಾರಿಜಾತ, ಸಂ. 3, ಪು.422 ವಿಷ್ಣುಧರ್ಮೋತ್ತರೇ)*

ಇದರನ್ವಯ ತೆಂಗಿನೆಣ್ಣೆಯನ್ನೂ ಉಪಯೋಗಿಸಬಹುದೆಂಬ ಅಭಿಪ್ರಾಯವಾಗುತ್ತದೆ.

**ಘೃತಪ್ರದೀಪಃ ಪ್ರಥಮ ಸ್ತಿಲತೈಲೋದ್ಭವಸ್ತತಃ ।**
**ಸಾರ್ಷಪಃ ಫಲನಿರ್ಯಾಸಜಾತೋ ವಾ ರಾಜಿಕೋದ್ಭವಃ।**
**ದಧಿಜಶ್ಚಾಣುಜಶ್ಚೈವ ಪ್ರದೀಪಾಃ ಸಪ್ತಪ್ರ ಕೀರ್ತಿತಾಃ॥**

*(ಶಬ್ದ ಕಲ್ಪದ್ರುಮ, 'ದೀಪ' ಪು. 718)*

ಇಲ್ಲಿ ಪ್ರಾಶಸ್ತ್ಯಕ್ಕನುಗುಣವಾಗಿ ತುಪ್ಪ ಮತ್ತು ಆರು ದೀಪದೆಣ್ಣೆಗಳನ್ನು ಹೆಸರಿಸಿದೆ. ಅವುಗಳಲ್ಲಿ 'ಫಲ ನಿರ್ಯಾಸ ಜಾತ' ಎಣ್ಣೆಯು ಪ್ರಾಯಃ ತೆಂಗಿನೆಣ್ಣೆಯನ್ನು ನಿರ್ದೇಶಿಸುತ್ತದೆ. ಇಲ್ಲಿ ಕೂಡ ದೀಪಕ್ಕೆ ಎಣ್ಣೆಗಳಲ್ಲಿ ಎಳ್ಳೆಣ್ಣೆಯೇ ಪ್ರಶಸ್ತವೆಂಬುದು ಸಿದ್ಧವಾಗುತ್ತದೆ.

ತೈಲಾಭ್ಯಂಗ, ತಿಲಹೋಮಾದಿ ಆರು ಬಗೆಗಳಲ್ಲಿ ಎಳ್ಳನ್ನು ಉಪಯೋಗಿಸುವುದು ಪಾಪನಾಶಕವೆನ್ನಲಾಗಿದೆ.

**ತಿಲೋದ್ವರ್ತೀ ತಿಲಸ್ನಾಯೀ ತಿಲಹೋಮೀ ತಿಲೋದಶೀ**
**ತಿಲಸ್ಯದಾತಾ ಭೋಕ್ತಾಶ್ಚ ಷಟ್ತಿಲಾ ಪಾಪನಾಶನಾಃ॥**

*(ವಿಧಾನ ಪಾರಿಜಾತ, ಸಂ.3 ಪು.169, ಹೇಮಾದ್ರೌ)*

ಮಹಾಭಾರತವು ಇದೇ ಅಭಿಪ್ರಾಯವನ್ನು ಇನ್ನಷ್ಟು ಸಂಗ್ರಹಿಸಿ ಹೇಳಿದೆ-

**ತಿಲಭಕ್ಷಯಿತವ್ಯಾಶ್ಚ ಸಾದ ತ್ವಾಲಂಭನಂ ಚ ತೈಃ।**
**ಕಾರ್ಯಂ ಸತತಮಿಚ್ಛದ್ಭಿಃ ಶ್ರೇಯಃ ಸರ್ವಾತ್ಮನಾ ಗೃಹೇ॥**

*(ಅನು ಶಾಸನ ಪರ್ವ 68ನೇ ಅಧ್ಯಾಯ, ಶ್ಲೋ. 19-20)*

(ಶ್ರೇಯಸ್ಸನ್ನು ಬಯಸುವವನು ತನ್ನ ಮನೆಯಲ್ಲಿ ನಿತ್ಯವೂ ಎಳ್ಳನ್ನು ಯಾವುದೇ ರೀತಿಯಿಂದಾಗಲೀ ಯಾವುದೇ ಕಾರಣಕ್ಕಾಗಲೀ ಉಪಯೋಗಿಸುತ್ತಿರಬೇಕು.) ಎಳ್ಳೆಣ್ಣೆಯು ಆರೋಗ್ಯವನ್ನೂ ಆಯುಷ್ಯವನ್ನೂ ಹೆಚ್ಚಿಸುತ್ತದೆ. ಪಾಪವನ್ನೂ ಅಮಂಗಳವನ್ನೂ ಹೋಗಲಾಡಿಸುತ್ತದೆ. ಸಂಪತ್ತನ್ನು ಕೊಡುತ್ತದೆ.

**ತೈಲಂ ಪುಷ್ಟೀಕರಂ ನಿತ್ಯಮಾಯುರ್ವೃದ್ಧ್ಯ ಘನಾಶನಮ್ ।**
**ಅಮಾಂಗಲ್ಯಹರಂ ಶ್ರೀ ಮದತಃ ಶಾಂತಿಂತ ಪ್ರಯಚ್ಛಮೇ॥**

*(ದಾನಚಂದ್ರಿಕಾ, ಪು. 68)*

ಒಟ್ಟಿನಲ್ಲಿ ದೀಪಕ್ಕೆ ಎಳ್ಳೆಣ್ಣೆಯು ಅತ್ಯಂತ ಪ್ರಶಸ್ತ. ಅದನ್ನು ಮನೆಯಲ್ಲಿ ಉಪಯೋಗಿಸಬಾರದೆನ್ನುವುದು ಒಂದು ತಪ್ಪು ಕಲ್ಪನೆ. ನಿರಾಧಾರ ಕೂಡ. ದೀಪಕ್ಕೆ ತೆಂಗಿನೆಣ್ಣೆಯು ನಿಷಿದ್ಧವಲ್ಲದಿದ್ದರೂ ಎಳ್ಳೆಣ್ಣೆಯಷ್ಟು ಪ್ರಶಸ್ತವಲ್ಲ.

**– (ಸಂಗ್ರಹ) ವಿಜಯಕುಮಾರ ಪು. ಗಾಯತ್ರಿ (ಮಲಾಡ್)**

*PAGE DONATED BY : **SHRI VIVEK BHAGWAT,** MULUND (DEC.-2010)*